ಅಧ್ಯಕ್ಷರು.—ರೆಸಲ್ಯೂಷನ್ ಮೂವ್ ಮಾಡುವವರೆಗೆ ಸ್ವಲ್ಪ ಹೊತ್ತು ಮಾತನಾಡಿ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂಥ ಈ ಒಂದು ಆಯವ್ಯಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ, ಮತ್ತು ವಿತಕ್ಯಾಗಿ ವಿರೋಧ ಮಾಡುತ್ತಿದ್ದೇನೆಂಬ ಬಗ್ಗೆ ಕೂಡ ತಮ್ಮ ಮುಂದೆ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಮುಖ್ಯವಾಗಿ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ...

ಅಧಿಕೃತ ನಿರ್ಣಯ

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ವಿಚಾರದಲ್ಲಿ ಮಹಾಜನ್ ವರದಿಯನ್ನು ವಿಳಂಬವಿಲ್ಲದೆ ಜಾರಿಗೊಳಿಸುವ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈಗ ರೆಸಲ್ಯೂಷನ್ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಯಿತು, ನಾಳೆ ಮುಂದುವರಿಸುತ್ತೇನೆ.

ಅಧ್ಯಕ್ಷರು.—ಈಗ ಮುಖ್ಯಮಂತ್ರಿಗಳಿಂದ ಪ್ರಸ್ತಾವದ ಮಂಡನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಾನು ಈ ಒಂದು ಪ್ರಸ್ತಾವವನ್ನು ಈ ಸದನದ ಒಮ್ಮತದ ಒಪ್ಪಿಗೆಗಾಗಿ ಮಂಡಿಸಲಿಕ್ಕೆ ತಮ್ಮ ಪರವಾನಗಿಯನ್ನು ಕೇಳುತ್ತಿದ್ದೇನೆ.

> "ಮಹಾಜನ್ ಆಯೋಗದ ಐತೀರ್ಪನ್ನು ಸಮಗ್ರವಾಗಿ ಜಾರಿಗೊಳಿಸುವ ಅನಿವಾರ್ಯತೆಯ ಬಗ್ಗೆ ಈ ಸದನವು ಈ ಹಿಂದೆ ಎರಡು ಬಾರಿ ಒಮ್ಮತದ ನಿರ್ಣಯವನ್ನು ಅಂಗೀಕರಿಸಿದೆ. ಮಹಾಜನ್ ವರದಿಯನ್ನು ಜಾರಿಗೆ ತರುವುದರಲ್ಲಿ ಆದ ವಿಳಂಬದ ದುರ್ಲಾಭವನ್ನು ಮಹಾರಾಷ್ಟ್ರದ ಮುಖಂಡರು ಪಡೆದು ಆಗಾಗ್ಗೆ ಎರಡೂ ರಾಜ್ಯಗಳಲ್ಲಿ ಘರ್ಷಣೆಯ ವಾತಾವರಣವನ್ನು ಉಂಟು ಮಾಡುವುದು ಖಂಡನೀಯ. ಮಹಾಜನ್ ಆಯೋಗದ ನೇಮಕವಾದಾಗ ಆದು ನೀಡುವ ತೀರ್ಮಾನ ಅಂತಿಮವಾದುದೆಂದೂ, ಸಂಬಂಧಿಸಿದವರೆಲ್ಲರ ಮೇಲೆ ಆದು ಬಂಧನಕಾರಿ ಎಂದು ಒಪ್ಪಿಕೊಳ್ಳಲಾಗಿತ್ತು. ಆ ಒಪ್ಪಿಗೆಯಿಂದ ಯಾರೊಬ್ಬರಿಗೂ ಜಾರಿಕೊಳ್ಳುವ ಅವಕಾಶ ಇಲ್ಲ. ಆದ್ದರಿಂದ ರಾಷ್ಟ್ರದ ಸರ್ವಾಗ್ರತೆಯ ದೃಷ್ಟಿಯಿಂದಲೂ ಮತ್ತು ಆಗಾಗ ಉಂಟಾಗುವ ಅನಾವಶ್ಯಕ ಕಲಹ ಕಚ್ಚಾಟಗಳನ್ನು ತಪ್ಪಿಸುವ ದೃಷ್ಟಿಯಿಂದಲೂ ಮಹಾಜನ್ ವರದಿಯನ್ನು ಸ್ವಲ್ಪವೂ ವಿಳಂಬ ಮಾಡದೆ ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಕೇಂದ್ರ ಸರ್ಕಾರವನ್ನು ಈ ಸದನವು ಆಗ್ರಹಪಡಿಸುತ್ತದೆ."

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ರಾಮಕೃಷ್ಣ ಹೆಗಡೆ —ಮಾನ್ಯ ಅಧ್ಯಕ್ಷರೇ, ಇದೊಂದು ದುರ್ದೈವದ ವಿಚಾರವೆಂದು ನಾನು ಹೇಳಲೇಬೇಕಾಗುತ್ತದೆ. ಈ ಒಂದು ಪ್ರಸ್ತಾವದ ಅಗತ್ಯ ಏಕೆ ಬಿತ್ತು ಎಂದರೆ ನಮ್ಮ ಕರ್ನಾಟಕದ ಜನತೆಯ ಸೌಜನ್ಯ, ಸಹನಶೀಲತ ಇವುಗಳ ಪರೀಕ್ಷೆ ಕಳೆದ ಎರಡು ಮೂರು ವರ್ಷಗಳ ಅವಧಿಯಲ್ಲಿ ಅನೇಕ ಬಾರಿ ಉಂಟಾಗಿದೆ. ಪ್ರತಿ ಸಲ ಮಹಾರಾಷ್ಟ್ರ ಶಾಸನ ಸಭೆಯ ಅಧಿವೇಶನ ಪ್ರಾರಂಭವಾಗುವ ವೇಳೆಯಲ್ಲಿ ಮತ್ತು ಪ್ರತಿ ಚುನಾವಣೆಗೆ ಸ್ವಲ್ಪ ತಿಂಗಳ ಮೊದಲು ಒಂದಲ್ಲ ಒಂದು ರೀತಿಯ ಚಳುವಳಿಯನ್ನು ಪ್ರಾರಂಭ ಮಾಡಿ ಶಾಂತಿಭಂಗ ಮಾಡತಕ್ಕ ಕೃತ್ಯವನ್ನು ಮಹಾರಾಷ್ಟ್ರದ ಅನೇಕ ಮುಖಂಡರು ಕಳೆದ ಅನೇಕ ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ. ಕನ್ನಡಿಗರಿಗೆ ಎಂದೂ ತಮಗೆ ಸೇರದ ಯಾವುದೇ ಭಾಗವನ್ನು, ಯಾವುದೇ ಪ್ರದೇಶವನ್ನು ಕಬಳಿಸಬೇಕೆಂದು ಹೇಳತಕ್ಕ ಇಚ್ಛೆ ಇಲ್ಲ. ಹಾಗೆ ನೋಡಿದರೆ ರಾಜ್ಯದ ಪುನರ್ ರಚನಾ ಆಯೋಗದವರು ಯಾವ ಒಂದು ವರದಿಯನ್ನು ಕೊಟ್ಟರೋ ಆ ವರದಿಯಿಂದ ಕರ್ನಾಟಕಕ್ಕೆ ಆದಷ್ಟು ಹಾನಿ ಬೇರೆ ಯಾವುದೇ ರಾಜ್ಯಕ್ಕೂ ಆಗಿಲ್ಲ ಎಂದು ಹಿಂದೆಯೂ ನಾನು ಹೇಳಿದ್ದೇನೆ, ಇವತ್ತೂ ಕೂಡ ಅದನ್ನು ನೆನಪು ಮಾಡಿಕೊಡುವುದಕ್ಕೆ

ಬಯಸುತ್ತೇನೆ. ಆಗ ಯಾವ ಸಂದರ್ಭ ಇತ್ತು, ಯಾವ ರೀತಿಯ ಕಾನ್ಸ್ಪಿರಸಿ ನಡೆಯಿತು ಆ ವಿಚಾರ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದಲ್ಲ ಒಂದು ದಿವಸ ಇತಿಹಾಸದಲ್ಲಿ ಅದು ಬರುತ್ತದೆ. ಉದಾಹರಣೆಗೆ ನಮಗೆ ನಿಜವಾಗಿ ಸೇರಬೇಕಾಗಿದ್ದಂಥ ಉದಗಮಂಡಲ ನಮ್ಮ ಕೈ ತಪ್ಪಿಹೋಯಿತಂ. ಶಾಶ್ವತವಾಗಿ ಹೋಯಿತು. ಅದೇ ರೀತಿ ಇಂದು ತಮಿಳುನಾಡಿನಲ್ಲಿರತಕ್ಕ, ತಮಿಳುನಾಡಿಗೆ ಸೇರಿ ಹೋಗಿರತಕ್ಕ ಅನೇಕ ಪ್ರದೇಶಗಳು, ಸಾಷ್ಟು ವಿಸ್ತಾರವಾದಂಥ ಪ್ರದೇಶ ನ್ಯಾಯವಾಗಿ ನಮಗೆ ಸೇರಬೇಕಾಗಿತ್ತು. ಅದು ಶಾಶ್ವತವಾಗಿ ಹೋಯಿತಂ. ಅದೇ ರೀತಿ ಹಿಂದಿನ ಮಹಾರಾಷ್ಟ್ರ ರಾಜ್ಯದಲ್ಲಿ ಉಚ್ಚ ಕನ್ನಡ ಪ್ರದೇಶಗಳೆಂದು ಹೆಸರಾದಂಥ ಅನೇಕ ತಾಲ್ಲೂಕುಂಗಳು ಪ್ರದೇಶಗಳು ಮಹಾರಾಷ್ಟ್ರದಲ್ಲಿ ಹೋಗಿವೆ. ಕೇರಳದಲ್ಲಿರುವ ಕಾಸರಗೋಡು ಇಡೀ ತಾಲ್ಲೂಕು ನಮಗೆ ಸೇರಬೇಕಾಗಿತ್ತು. ಅದು ಹೋಗಲಿ, ಕನಿಷ್ಟಪಕ್ಷ ಎರಡು ಹೋಬಳಿಯನ್ನಾದರೂ ಕೊಡುವುದಕ್ಕೆ ಅವರೇ ಒಪ್ಪಿಕೊಂಡಿದ್ದರು, ಅದೂ ಬರಲಿಲ್ಲ. ನಿಜಲಿಂಗಪ್ಪನವರ ಆಡಳಿತದಲ್ಲಿ ಆಂಧ್ರ ರಚನೆ ಆದಾಗ ಕೆಲವು ಪ್ರದೇಶಗಳು ನಮಗೆ ಬರಬೇಕಾಗಿತ್ತು. ಅದೂ ಬರಲಿಲ್ಲ. ಕನ್ನಡಿಗರು ಎಂದೂ ಚಳುವಳಿ ಮಾಡಲಿಲ್ಲ. ಕನ್ನಡಿಗರು ಬೇರೆಯವರ ಪ್ರಾಣವನ್ನು ತೆಗೆಯಲಿಲ್ಲ. ಕನ್ನಡಿಗರು ಶಾಂತಿ ಭಂಗ ಮಾಡಲಿಲ್ಲ. ಅವರು ಈ ವಿಷಯದಲ್ಲಿ ಏನು ಚಳುವಳಿ ಮಾಡಬೇಕೋ, ಮನವಿ ಕೊಡಬೇಕೋ, ಪ್ರಧಾನ ಮಂತ್ರಿಗಳನ್ನು ಮತ್ತು ಕೇಂದ್ರ ಸರ್ಕಾರವನ್ನು ಪುನಃ ಪುನಃ ಮನ ಒಲಿಸುವುದಕ್ಕೆ ಏನು ಪ್ರಯತ್ನ ಮಾಡಬೇಕೋ, ಅದನ್ನು ಮಾಡುತ್ತಾ ಬಂದರು. ಆದರೆ ಅದರಿಂದ ಯಾವುದೇ ಫಲ ಸಿಗಲಿಲ್ಲ. ರಾಜ್ಯ ಪುನರ್ ರಚನೆ ಆಯೋಗದ ವರದಿ ಬಂದಮೇಲೆ ನಮಗೆ ಎಷ್ಟೇ ಹಾನಿ ಆಗಿರಲಿ ಅನ್ಯಾಯ ಆಗಿರಲಿ ಅದನ್ನು ಒಪ್ಪಿಕೊಂಡೆವು. ರಾಜ್ಯದ ಪುನರ್ ರಚನಾ ಆಯೋಗದ ವರದಿ ಮೇಲೆ ಸಹಿ ಮಾಡಿದ್ದೇನಿದೆ ಅದಿನ್ನೂ ಆರಲೇ ಇಲ್ಲ. ಅಷ್ಟರೊಳಗೆ ಮಹಾರಾಷ್ಟ್ರದ ಅಂದಿನ ಮುಖ್ಯ ಮಂತ್ರಿಯಾದ ಮಾನ್ಯ ಚವಾಣ್ ಅವರು ಈ ಒಂದು ವಿವಾದವನ್ನು ಎಬ್ಬಿಸಿದರು. ಇವತ್ತಿಗೂ ನನಗೆ ನೆನಪಿದೆ. ನಮ್ಮ ರೆಕಾರ್ಡ್‌ನಲ್ಲಿ ಅವರ ಪತ್ರ ಇದೆ. ಅಂದು ನಮ್ಮ ಮುಖ್ಯ ಮಂತ್ರಿಗಳಾಗಿದ್ದಂಥ ಮಾನ್ಯ ನಿಜಲಿಂಗಪ್ಪನವರಿಗೆ ಪತ್ರ ಬರೆದು ಅದರಲ್ಲಿ ಏನು ಹೇಳಿದ್ದಾರೆಂದರೆ ರಾಜ್ಯದ ಪುನರ್‌ರಚನೆ ಆದರೂ ಮಾರ್ಜಿನಲ್ ರೀಅಡ್ಜಸ್ಟ್‌ಮೆಂಟ್ ಆಗತಕ್ಕ ಅಗತ್ಯ ಇದೆ ಎಂದು ಹೇಳಿದರಂ, ಮಾರ್ಜಿನಲ್ ಅಡ್ಜಸ್ಟ್‌ಮೆಂಟ್ ಎನ್ನುವುದು ಅವರಂ ಉಪಯೋಗಿಸಿದಂಥ ಶಬ್ದ. ಅದು ಹೋಗಿ ಕಾರವಾರ, ನಿಪ್ಪಾಣಿ, ಬೆಳಗಾಂ ಸಹಿತ ಮಹಾರಾಷ್ಟ್ರಕ್ಕೆ ಸೇರಲೇಬೇಕು ಎಂಬ ಘೋಷಣೆ ಅವರು ಮಾಡಿದ್ದಾರೆ. ಮಹಾರಾಷ್ಟ್ರ ಮುಖಂಡರ ಒಂದು ವಾದ ಆ ರೀತಿ ಇದೆ, ರಿಲೇಟೀವ್ ಮೆಜಾರಿಟಿ ಆಧಾರದ ಮೇಲೆ ತೀರ್ಮಾನ ಮಾಡಿ ಎಂಬ ವಾದ ಇದೆ. ರಿಲೇಟೀವ್ ಮೆಜಾರಿಟಿ ಆಧಾರವನ್ನು ತೆಗೆದುಕೊಂಡರೆ ಈ ರಾಷ್ಟ್ರದ ಯಾವುದೇ ಒಂದು ರಾಜ್ಯದಲ್ಲೂ ಭಾಷಾ ವಿಕ್ಯಮತ್ಯದಿಂದ ಜೀವನ ಮಾಡತಕ್ಕದ್ದು ಸಾಧ್ಯವಾಗಲಿಕ್ಕಿಲ್ಲ. ಒಂದೇನಗರದಲ್ಲಿ ರಿಲೇಟೀವ್ ಮೆಜಾರಿಟಿ ಭಾಷಾ ಭಾಷೆಗಳಲ್ಲಿದ್ದರೆ, ಅದರ ಆಧಾರದ ಮೇಲೆ ನಾವು ಪುನಃ ಜಿಲ್ಲೆ ಅಥವಾ ರಾಜ್ಯಗಳ ವಿಂಗಡಣೆಯನ್ನು ಮಾಡುವುದಕ್ಕೆ ಹೋದರೆ ಇದಕ್ಕೆ ಎಂದೆಂದೂ ಪರಿಹಾರವಾಗುವುದಕ್ಕೆ ಸಾಧ್ಯ ಇಲ್ಲ. ಮಹಾರಾಷ್ಟ್ರದ ಮುಖಂಡರು ಮತ್ತೊಂದು ವಾದವನ್ನು ಪುನಃ ಪುನಃ ಇಡುತ್ತಾರೆ. ಅದು ಏನೆಂದರೆ, ಹಾಗಾದರೆ ಜನಾಭಿಪ್ರಾಯದ ಮೇಲೆ ತೀರ್ಮಾನ ಮಾಡಿ ಎಂದು, ಕೇಂದ್ರ ಸರ್ಕಾರದ ಮುಂದೆ ಅಪರು ವಾದ ಮಾಡತಕ್ಕ ಸಂದರ್ಭದಲ್ಲಿ ಈ ಒಂದೇ ವಾದವನ್ನು ಅವರು ಮುಂದಿಡುತ್ತಿದ್ದಾರೆ. ನೀವು ಜನಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತೀರಲ್ಲ, ಅದರಂತೆ ಜನಾಭಿಪ್ರಾಯದ ಪ್ರಕಾರ ಮಾಡಿ ಎಂದು ಹೇಳುತ್ತಿದ್ದಾರೆ. ಮೊನ್ನೆ ತಾನೆ ಪುನಃ ರೆಫ್ರೆಂಡಮ್ ಆಧಾರದ ಮೇಲೆ ಮಾಡಿ ಅಂತ ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ, ರೆಫ್ರೆಂಡಮ್ ಆಧಾರದ ಮೇಲೆ ಇಂತಹ ನಿರ್ಣಯವನ್ನು ತೆಗೆದುಕೊಳ್ಳುವುದಾದರೆ ಇದರ ಇಂಪ್ಲಿಕೇಷನ್ ಅತ್ಯಂತ ಭಯಾನಕವಾದ ಇಂಪ್ಲಿಕೇಷನ್ ಆಗುತ್ತದೆ. ನಮ್ಮ ದೇಶದ ಬೇರೆ ಬೇರೆ ಮೂಲೆಗಳಲ್ಲಿ, ಬೇರೆ ಬೇರೆ ಭಾಗಗಳಲ್ಲಿ ಈ ತರಹದೆ ಬೇಡಿಕೆ ಬರುತ್ತವೆ ಆಗ ಅದನ್ನು ಕೇಂದ್ರ ಸರ್ಕಾರದವರು ನಿಲ್ಲಿಸುವುದಕ್ಕೆ ಸಾಧ್ಯ ಇಲ್ಲ. ಅನೇಕ ಜನ ಮಹಾರಾಷ್ಟ್ರದ ಮುಖಂಡರ ಮತ್ತೊಂದು ವಾದ ಏನೆಂದರೆ, ಬೆಳಗಾಂನಲ್ಲಿ ಮರಾಠಿ ಮಾತನಾಡುವ ಜನರ ಸಂಖ್ಯೆ ಹೆಚ್ಚಿದೆ, ಅದಕ್ಕಾಗಿ ಬೆಳಗಾಂ ಮಹಾರಾಷ್ಟ್ರಕ್ಕೆ ಸಿಕ್ಕಬೇಕು ಎನ್ನುವುದು ಇದು ಸತ್ಯ ಅಲ್ಲ. ಇಂದು ಮರಾಠಿ ಮಾತನಾಡುವ ಜನರ ಸಂಖ್ಯೆ ಬೆಳಗಾಂ ನಗರದಲ್ಲಿ ರಿಲೇಟಿವ್ ಮೆಜಾರಿಟಿ ಪ್ರಕಾರ ಮಾತನಾಡತಕ್ಕ ಸಂದರ್ಭದಲ್ಲಿಲ್ಲ. ಒಂದು ಕಾಲದಲ್ಲಿ ಇರಬಹುದು. ಆದರೆ ಮರಾಠಿ ಮಾತನಾಡತಕ್ಕವರ ಸಂಖ್ಯೆ ಇಷ್ಟು ಆಗುವುದಕ್ಕೆ ಕಾರಣವೇನು ? ನಮ್ಮ ಮಹಾರಾಷ್ಟ್ರದ ಮುಖಂಡರು ಬಹಳ ಕನ್ನಿನೀಯೆಂಟ್ ಆಗಿ ಮಾಡಿದ್ದಾರೆ.

ಬೆಳಗಾಂ ಮತ್ತು ಷಹಪುರ ಇವೆರಡೂ ಪ್ರತ್ಯೇಕ ಪ್ರತ್ಯೇಕವಾದ ನಗರಸಭೆಗಳಾಗಿ ಮೊದಲು ಇದ್ದವು ಷಹಪುರ್ ಮುನಿಸಿಪಾಲಿಟಿ, ಷಹಪುರ್ ಊರು ಇದು ಸಾಂಗ್ಲಿ ಸಂಸ್ಥಾನಕ್ಕೆ ಸೇರಿದಂತಹ ಪ್ರದೇಶವಾಗಿತ್ತು. ಅಲ್ಲಿ ಮರಾಠಿ ಸರ್ಕಾರಿ ಭಾಷೆಯಾಗಿದ್ದರಿಂದ ಅಲ್ಲಿ ಮರಾಠಿ ಶಿಕ್ಷಣದ ಮಾಧ್ಯಮವಾಗಿದ್ದರಿಂದ, ಆ ರಾಜ್ಯದ ಭಾಗವಾಗಿ ಆ ಊರಿನಲ್ಲಿ ಆ ಪದ್ಧತಿಯನ್ನು ಜಾರಿಯಲ್ಲಿ ತಂದರು. ಹೀಗಾಗಿ ಷಹಪುರದಲ್ಲಿರತಕ್ಕ ೧೦೦ಕ್ಕೆ ೧೦೦ ರಷ್ಟು ಜನರ ಮಾತೃ ಭಾಷೆ ಮರಾಠಿ ಅಂತ ಅಂದು ಬರೆದುಕೊಂಡು ಹೋದರು. ರಾಜ್ಯದ ಪುನರ್‌ವಿಂಗಡಣೆ ಆದ ಮೇಲೆ ಈ ಷಹಪುರ್ ನಗರ ಬೆಳಗಾಂ ನಗರದ ಜೊತೆಯಲ್ಲಿ ವಿಲೀನವಾಯಿತು. ಆದ್ದರಿಂದ ಬೆಳಗಾಂ ನಗರದಲ್ಲಿ ಮರಾಠಿ ಮಾತನಾಡತಕ್ಕ ಮಾತೃಭಾಷೆಯಾದಂತಹ ವರಸಂಖ್ಯೆ ಇದ್ದಕ್ಕಿದ್ದ ಹಾಗೆ ಏರುವುದಕ್ಕೆ ಇದೂ ಒಂದು ಕಾರಣವಾಯಿತು. ಅದನ್ನೆ ಬಿಟ್ಟರೆ ಬೇರೆ ಯಾವ ಕಾರಣವೂ ಇಲ್ಲ. ಇಂದು ಮಹಾರಾಷ್ಟ್ರದ ಮುಂಖಂಡರು ಎಲ್ಲಿಗೆ ಬಂದಿದ್ದಾರೆಂದರೆ,ಬಾಕಿ ವಿಚಾರವನ್ನು ಅವರು ಎತ್ತುವುದಿಲ್ಲ,ಆದರೆ ನಾನು ಅವರಿಗೆ ಉತ್ತರ ಕೊಟ್ಟ ಮೇಲೆ ಈ ವಾದವನ್ನು ಈಗ ಮುಂಡನೆ ಮಾಡುತ್ತಿಲ್ಲ. ಏನು ಉತ್ತರ ಕೊಟ್ಟೆ ಎಂದರೆ ನೀವು ಚುನಾವಣೆಯಲ್ಲಿ ನಾವು ಗೆಲ್ಲುತ್ತೇವೆ ಅಂತ ಹೇಳುತ್ತಿದ್ದೀರಿ.ಹೌದು ಚುನಾವಣೆಯಲ್ಲಿ ಮೊದಲು ಕಾರವಾರದಲ್ಲೂ ಗೆಲ್ಲುತ್ತಿದ್ದೀರಿ. ಆದರೆ ಇಂದು ಗೆಲ್ಲುತ್ತಿಲ್ಲ.ಚುನಾವಣೆಯಲ್ಲಿ ಔರಾದ್‌ನಲ್ಲೂ ಗೆಲ್ಲುತ್ತಿದ್ದಿರಿ. ಆದರೆ ಇಂದು ಔರಾದ್‌ನಿಂದ ಗೆಲ್ಲುತ್ತಿಲ್ಲ. ಅದೇ ರೀತಿ ಸಿಂಧೂಪುರದಲ್ಲಿ ಚುನಾವಣೆಯಲ್ಲಿ ಗೆಲ್ಲುತ್ತಿದ್ದಿರಿ. ಇಂದು ಗೆಲ್ಲುತ್ತಿಲ್ಲ. ಚುನಾವಣೆಯಲ್ಲಿ ಬಾಗೇವಾಡಿಯಲ್ಲೂ ಗೆಲ್ಲುತ್ತಿದ್ದಿರಿ. ಇವತ್ತು ನೀವು ಗೆಲ್ಲುತ್ತಿಲ್ಲ, ಚುನಾವಣೆಯಲ್ಲಿ ನಿಪ್ಪಾಣಿಯಲ್ಲೂ ಗೆಲ್ಲುತ್ತಿದ್ದಿರಿ. ನೀವು ಇಂದು ಚುನಾವಣೆಯಲ್ಲಿ ನಿಪ್ಪಾಣಿಯಲ್ಲಿ ಗೆಲ್ಲುತ್ತಿಲ್ಲ. ಒಂದು ಕಾಲಕ್ಕೆ ಈ ಮನೆಯಲ್ಲಿ ೭ ಜನ ಮರಾಠಿ ಏಕೀಕರಣ ಸಮಿತಿಯ ಸದಸ್ಯರು ಇದ್ದರು. ಆದರೆ ಇಂದು ಇರತಕ್ಕಂತಹದ್ದು ಕೇವಲ ೩. ಅಂದರೆ ಜನಾಭಿಪ್ರಾಯ ಯಾವ ರೀತಿ ಎನ್ನತಕ್ಕಂತಹದ್ದು ಇದರಿಂದ ಗೊತ್ತಾಗುತ್ತದೆ ಎಂದು ಉತ್ತರ ಕೊಟ್ಟೆ. ಆದರೂ ಅವರಿಗೆ ಬೆಳಗಾಂ ಮೇಲಿನ ಮೋಹ ಹೋಗಿಲ್ಲ. ಮಾನ್ಯ ಅಧ್ಯಕ್ಷರೇ, ಬೆಳಗಾಂ ಇದು ಇವತ್ತು, ನಿನ್ನೆ ಕರ್ನಾಟಕಕ್ಕೆ ಸೇರಿದ ಒಂದು ಭಾಗ ಅಲ್ಲ, ಸಾವಿರಾರು ವರ್ಷಗಳಿಂದ ಇದು ಕರ್ನಾಟಕದ ಭಾಗವಾಗಿತ್ತು. ಮಹಾರಾಷ್ಟ್ರದ ಆಡಳಿತ ಇಲ್ಲಿ ಬಂದಾಗಲೂ ಕೂಡಾ ಕರ್ನಾಟಕದ ಭಾಗ ಆಗಿತ್ತು. ಸಾಂಸ್ಕೃತಿಕವಾಗಿ, ಭಾಷಾನಾತ್ಮಕವಾಗಿ, ಐತಿಹಾಸಿಕವಾಗಿ ಯಾವ ದೃಷ್ಟಿಯಿಂದಲೇ ನೋಡಲಿ ಬೆಳಗಾಂ ಅವಿಭಾಜ್ಯವಾಗಿ ಕರ್ನಾಟಕದ ಒಂದು ಅಂಗ. ಆದುದರಿಂದ ಇದನ್ನು ಪ್ರತ್ಯೇಕ ಮಾಡತಕ್ಕ ವಿಚಾರವನ್ನೇ ಯಾರೂ ಎತ್ತಕೂಡದು. ಇದನ್ನು ಪ್ರತ್ಯೇಕ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಬೆಳಗಾಂನ್ನು ಕರ್ನಾಟಕದಿಂದ ಪ್ರತ್ಯೇಕ ಮಾಡಿದರೆ ಕರ್ನಾಟಕದ ಎರಡು ಶ್ವಾಸಕೋಶದಲ್ಲಿನ ಒಂದು ಶ್ವಾಸಕೋಶವನ್ನು ತೆಗೆದುಕೊಟ್ಟಂತಾಗುತ್ತದೆ. ಆದುದರಿಂದ ಇದನ್ನು ಎಂದೂ ಕೂಡಾ ಒಪ್ಪುವುದಕ್ಕೆ ಸಾಧ್ಯವಿಲ್ಲ ಸ್ವಲ್ಪ ಮೊದಲು ಈ ವಿಚಾರವನು ಪ್ರಸ್ತಾಪ ಮಾಡಿದ ನನ್ನ ವಿರೋಧೀ ಪಕ್ಷದ ಸ್ನೇಹಿತರು, ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದ ಮಾನ್ಯ ಶಂಕರ್‌ರಾವ್ ಚೌಹಾಣ್‌ರ ಹೇಳಿಕೆ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಬಗ್ಗೆ ನನ್ನ ಪ್ರತಿಕ್ರಿಯೆಯನ್ನು ನಾನು ಈಗಾಗಲೇ ಕೊಟ್ಟಿದ್ದೇನೆ ಕಳೆದ ೩ ವರ್ಷಗಳಲ್ಲಿ ಮಾನ್ಯ ಚೌಹಾಣ್ ಅವರು ನನ್ನ ಜೊತೆ ಯಾವಾಗ ಚರ್ಚೆ ಮಾಡಿದಾಗಲೂ ಮಾನ್ಯ ಬೊಮ್ಮಾಯಿಯವರು ನನ್ನ ಜೊತೆ ಇರುತ್ತಿದ್ದರು. ಬೊಮ್ಮಾಯಿಯವರು ಮೊದಲಿನಿಂದಲೂ ಈ ವಿಚಾರದಲ್ಲಿ ಬಹಳ ಆಸಕ್ತಿಯನ್ನು ವಹಿಸಿದ್ದಾರೆ. ಮತ್ತು ಅವರು ಎಲ್ಲಾ ಮಾತುಕತೆಗಳಲ್ಲೂ ಹಾಜರಿದ್ದಾರೆ. ಕಳೆದ ೫ ವರ್ಷಗಳ ಅವಧಿಯಲ್ಲಿ ನಾನು ಮಹಾರಾಷ್ಟ್ರದ ನಾಲ್ಕು ಜನ ಮುಖ್ಯ ಮಂತ್ರಿಗಳ ಜೊತೆ ಮಾತನಾಡತಕ್ಕ ಪ್ರಸಂಗ ಬಂತು. ಆದರೆ ಮಾನ್ಯ ಚೌಹಾಣ್ ಅವರು ಏನು ಒಂದು ಸೂಚನೆಯನ್ನು ನನಗೆ ಮಾಡಿದರು ಅದು ಗಂಭೀರವಾದ ಸೂಚನೆ ಎಂದು ಯಾರೂ ಗ್ರಹಿಸತಕ್ಕದ್ದಕ್ಕೆ ಸಾಧ್ಯವಿಲ್ಲ. ಮಾತುಕತೆ ಆಡುವಾಗ ಅನೇಕ ರೀತಿಯ ಅಲ್ಟರ್‌ನೇಟ್ ಸೂಚನೆಗಳು ಬಂದವು, ನಾನು ಅವರಿಗೆ ಹೇಳಿದೆ. ಬೆಳಗಾಂ ಒಂದನ್ನು ಬಿಟ್ಟು ನೀವು ಬೇರೆ ಯಾವುದೇ ರೀತಿಯ ಸ್ವಲ್ಪ ಹೆಚ್ಚು ಕಡಿಮೆ ಮಾಡುವುದಕ್ಕೆ ನೀವು ಸೂಚನೆ ಮಾಡಿದರೂ ಕೂಡಾ ಅದನ್ನು ಪರಿಶೀಲಿಸುವುದಕ್ಕೆ ತಯಾರು ಇದ್ದೇವೆ. ಯಾವುದಾದರೂ ಒಂದೆರಡು ಹಳ್ಳಿಗಳು ಹೆಚ್ಚಿಗೆ ಬೇಕೆಂದು ಹೇಳಿ ತೆಗೆದುಕೊಳ್ಳಿ ಅದರಲ್ಲಿ ನಮ್ಮ ಒಂದು ಹಠ ಇತ್ತು. ಮಹಾಜನ್ ವರದಿಯಲ್ಲಿ ಕೆಲವು ವಿರೋಧಾಭ್ಯಾಸಗಳು ಇವೆ ಎಂದು ತಾವು ಹೇಳುತ್ತಿದ್ದೀರಿ. ಒಂದು ಒಳ ಹಳ್ಳಿಯಲ್ಲಿ ಕನ್ನಡ ಮಾತನಾಡುವ ಜನ ಇದ್ದು ಸಂತ್ತಮುಂತ್ತ ಮರಾಠಿ ಪ್ರದೇಶವಿರುತ್ತದೆ, ಹಾಗೆಯೇ ಒಂದು ಮರಾಠಿ ಹಳ್ಳಿಯ ಸುತ್ತ ಕನ್ನಡ ಪ್ರದೇಶವಿರುತ್ತದೆ. ಇಂತಹ ಪ್ರದೇಶದ ಬಗ್ಗೆ

ನಾವು ಕುಳಿತು ಮೊದಲಂ ನಂತರ ಮೇಲೆ ನೋಡಿ ನಂತರ ನಮ್ಮ ಹಾಗೂ ಆ ರಾಜ್ಯದ ಅಧಿಕಾರಿಗಳನ್ನು ಆ ನಂತರ ಪ್ರದೇಶಕ್ಕೆ ಕಳುಹಿಸಿ, ಎಲ್ಲೆಲ್ಲಿ ಮಹಾಜನ್ ಕಮಿಷನರ್‌ರವರು ಹಳ್ಳಿಗಳು ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಹೇಳಿದ್ದಾರೆ ಹಾಗೂ ಎಲ್ಲೆಲ್ಲಿ ಹಳ್ಳಿಗಳು ಕರ್ನಾಟಕಕ್ಕೆ ಬರಬೇಕೆಂದು ಹೇಳಿದ್ದಾರೆ, ಎಲ್ಲಿ ವಿರೋಧಾಭಾಸ ಇದೆ ಎಂದು ಹೇಳಿದ್ದಾರೆ ಅದನ್ನು ಇದ್ದರೆ ಸರಿ ಮಾಡೋಣ. ಆದರೆ ಬೆಳಗಾಂ ವಿಚಾರದಲ್ಲಿ ನೀವು ಮಾತ್ರವೇ ಒಂದು ಮಾತನ್ನು ಆಡುವ ಹಾಗೆ ಇಲ್ಲ ಎಂದು ಹೇಳಿದ್ದೇನೆ ಆದರೆ ಪ್ರಸ್ತಾವನೆ ಆದೇ ಮಾತನ್ನು ಅವರು ಹೇಳಿದರು. ಮಹಾರಾಷ್ಟ್ರದಲ್ಲಿ ಹಿಂದೆ ಮಾನ್ಯ ವಿ. ಪಿ ನಾಯಕ್ ಅವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಇಲ್ಲಿ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆಗಲೂ ಎಲ್ಲೇ ಮಾತುಕತೆಗಳಾದರೂ ಕೂಡಾ ಮಾನ್ಯ ನಿಜಲಿಂಗಪ್ಪನವರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ೧೯೫೭ನೇ ಇಸವಿಯಿಂದ ಇಲ್ಲಿಯವರೆವಿಗೂ ೨೧ ವರ್ಷಗಳಲ್ಲಿ ಯಾವುದೇ..... ನಾನು ವಿರೋಧಪಕ್ಷದಲ್ಲಿ ಇದ್ದಾಗಿನ ಮಾತು ಬಿಟ್ಟು ಸರ್ಕಾರದಲ್ಲಿ ಯಾವಾಗಲೇ ಇರಲಿ ನಾನು ಸರ್ಕಾರದಲ್ಲಿ ಮಂತ್ರಿಯಾಗದೇ ಇದ್ದರೂ ಕೂಡ.....

ಶ್ರೀ ಬಿ. ಬಸವಲಿಂಗಪ್ಪ.—ಕಾಂಗ್ರೆಸ್ಸಿನವರಾಗಿದ್ದಾಗ...

ಶ್ರೀ ರಾಮಕೃಷ್ಣ ಹೆಗಡೆ.—ಪಕ್ಷ ಮುಖ್ಯವಲ್ಲ. That Congress was a different Congress. ಆವಾಗ ನಮ್ಮ ಗಂಡಿ ಬೆಟ್ಟದ ಮೇಲೆ ನಾವು ಮಾತುಕತೆಗೆ ವಿಫಲಡಿದ್ದೆವು ಸುಮಾರು ೯-೩೦ ಗಂಟೆಯಿಂದ ೧೦ ಗಂಟೆ ೧೦-೧೫ ಗಂಟೆಯವರೆಗೆ ಔಪಚಾರಿಕವಾಗಿ ಮಾತುಕತೆಯಾಯಿತು. ಕಾಫಿ ಬ್ರೇಕ್ ಇದ್ದಾಗ ಮಹಾರಾಷ್ಟ್ರದ ಆಗಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವಿ. ಪಿ ನಾಯಕ್‌ರವರು ನನ್ನನ್ನು ಕೈಹಿಡಿದು ರೂಮಿನಿಂದ ಹೊರಗಡೆ ಕರೆದುಕೊಂಡು ಹೋಗಿ ಈ ಮಾತುಕತೆಯಿಂದ ಏನೂ ಪ್ರಯೋಜನವಿಲ್ಲ, ಕಾರಣ ನಿಪ್ಪಾಣಿ, ಮತ್ತೊಂದು ಮಗದೊಂದರಲ್ಲಿ ನಮಗೆ ಆಪ್ಶೋದು ಆಸ್ತೆಯಿಲ್ಲ ಏನೇ ಆದರೂ ಬೆಳಗಾಂ ನಮಗೆ ಬೇಕೇ ಬೇಕು. ಬೆಳಗಾಂ ನಮಗೆ ಪೂರ ಸಿಗದಿದ್ದರೂ ಕೆಲವು ಭಾಗ ಸಿಗಬೇಕೆಂದರು. ಅಷ್ಟನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಮೊದಲು he went on beating about the bush. ಹೇಗಾದರೂ ಮಾಡೋಣ. ಬೆಳಗಾಂ ವಿಚಾರದಲ್ಲಿ ನಾವು ಇಬ್ಬರೂ ತೃಪ್ತಿಕರವಾದ ಒಂದು ಪರಿಹಾರವನ್ನು ಹುಡುಕೋಣವೆಂದು ಹೇಳಬಿಯೆಂದು ನಾನು ಹೇಳಿದೆ. ಆಗ ಅವರು ಹೇಳಿದರು ಬೆಳಗಾಂನ ಅರ್ಧಭಾಗ ನೀವು ಇಟ್ಟುಕೊಳ್ಳಿ, ಅರ್ಧಭಾಗವನ್ನು ನಮಗೆ ಕೊಡಿಯೆಂದು ಕೇಳಿದರು. ನಾನು ಆಗ ಹೇಳಿದೆ. ಬೆಳಗಾಂ ಅನ್ನು ಬರ್ಲಿನ್ ಮಾಡಲಿಕ್ಕೆ ಸಾಧ್ಯವಿಲ್ಲ. ಅದು ಎಂದೆಂದಿಗೂ ಸಾಧ್ಯವಿಲ್ಲ, ಪ್ರಾಕ್ಟಿಕಲ್ ಆಗಿ ಆಗೋಲ್ಲ, ನಾವು ಬೆಳಗಾಂ ಅನ್ನು ಎಂದೆಂದಿಗೂ ಬೇರ್ಪಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ, ನಾನು ಆಗ ಅವರಿಗೆ ಹೇಳಿದೆ, ಹಾಗಾದರೆ ಮಹಾರಾಷ್ಟ್ರದಲ್ಲಿರತಕ್ಕ ಅನೇಕ ಶಹರಗಳನ್ನು ಆ ರೀತಿ ಮಾಡುವ ಪ್ರಸಂಗ ಬರಬಹುದೆಂದು ಹೇಳಿದೆ. ಮಾತುಕತೆ ಫೇಲಾಯಿತು. ಮಹಾಜನ್ ಕಮಿಷನ್ ನೇಮಕವಾಗುವ ಹಿಂದಿನ ದಿವಸ ಆಗಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರನ್ನು ಭೇಟಿಯಾದಾಗ, ಪ್ರಧಾನ ಮಂತ್ರಿಗಳು ನನಗೆ ಅಪಾಯಿಂಟ್‌ಮೆಂಟ್ ಕೊಟ್ಟಾಗ ಅವರ ಆಫೀಸಿನಲ್ಲಿ ವಿ ಪಿ ನಾಯಕ್‌ರವರು ಕುಳಿತಿದ್ದರು. ಪ್ರಧಾನ ಮಂತ್ರಿಗಳಿಂದ ವಿ. ಪಿ, ನಾಯಕ್‌ರವರಿಗೆ ಮೊದಲು ಕರೆ ಬಂತು. ಅವರು ಒಳಗಡೆ ಹೋದ ನಾಲ್ಕೈದು ನಿಮಿಷಗಳಲ್ಲಿ ನನಗೂ ಕರೆ ಬಂತು. ಒಳಗಡೆ ಹೋಗಿ ನೋಡಿದಾಗ ನನಗೆ ಆಶ್ಚರ್ಯವಾಯಿತು. ಅದು ತುಸು ಹೆಚ್ಚು ಕಡಿಮೆ ಕ್ಯಾಬಿನೇಟ್ ಮೀಟಿಂಗ್ ರೀತಿ ಇತ್ತು, ಅಲ್ಲಿ ನಂದಾರೆವರು ಚವಾಣ್‌ರವರು ಆಶೋಕಮೆಹ್ತಾರವರು ಇನ್ನು ಅನೇಕ ಹಿರಿಯ ಮಂತ್ರಿಗಳು ಇದ್ದರು ನಾನು ಒಳಗಡೆ ಹೋದಾಗ ವಿ. ಪಿ ನಾಯಕ್‌ರವರು ತಮ್ಮ ಪಕ್ಕದಲ್ಲಿಯೇ ಒಂದು ಕುರ್ಚಿ ಖಾಲಿಯಿತ್ತು ನನ್ನನ್ನು ಸ್ವಾಗತ ಮಾಡಿದರು. ಆಗ ನಾಯಕ್‌ರವರು ಶ್ರೀಮತಿ ಇಂದಿರಾಗಾಂಧಿಯವರ ಕಡೆಗೆ ತಿರುಗಿ ಸ್ವತಃ ಹೇಳಿದರು. I am quoting the words of V. P. Naik, "Madam Mr. Hegde s a most pleasant person to talk with except on Border" ಎಂದರು.

೫-೦೦ ಪಿ.ಎಂ,

ಆಮೇಲೆ ಕುಳಿತು ನಾನು ಹೇಳಿದೆ ಏನೆಂದರೆ ಮಹಾಜನ್ ಕಮೀಷನ್ ಅಪಾಯಿಂಟ್ ಮಾಡ ತಕ್ಕಂಥ ಅಗತ್ಯ ಇಲ್ಲ, ಯಾವುದೇ ತರಹದ್ದು ಅವಶ್ಯಕತೆ ಇಲ್ಲ ಎಂದು. ಇಷ್ಟು ಕಮಿಟಿಗಳು ಆಗಿವೆ. ಇಲ್ಲಿಯವರೆಗೆ ಪ್ರತಿಯೊಂದು ರಿಪೋರ್ಟ್ ಕೂಡ ಕರ್ನಾಟಕಕ್ಕೆ ಫೇವರಬಲ್ ಆಗಿದೆ. ೫ವ

ಮಹಾರಾಷ್ಟ್ರದವರದ್ದು ಒಂದು ಇಟಿಟ್ಯೂಡ್ ಏನು ಇದೆ ಎಂದರೆ ಎಲ್ಲಿಯವರೆಗೆ ಅವರಿಗೆ ಹಿತ ಆಗುವುದಿಲ್ಲವೋ ಅಲ್ಲಿಯವರೆಗೆ ಕಮೀಷನ್ ನೇಮಕ ಮಾಡಬೇಕೆಂದು ಕೇಳುತ್ತಾ ಹೋಗುತ್ತಾರೆ ಎಂದು ಹೇಳಿದೆ. ಇದಾದಮೇಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಏನಾಯಿತು ಎಂದು ಗೊತ್ತಿದೆ. ನಾವು ಇನ್ಸಿಸ್ಟ್ ಮಾಡಿ ಶ್ರೀ ಯಶವಂತ್ ರೈ ಬಿ' ಚವಾಣ್ ಅವರ ಬೇಟಿಗೆ ಹೋದಾಗ ಅವರು ನನ್ನ ಕೈಯನ್ನು ತಮ್ಮ ಕೈಯಲ್ಲಿಟ್ಟುಕೊಂಡು ಹೇಳಿದರು 'ನಾನು ಮಾತು ಕೊಡುತ್ತೇನೆ. ಇದೊಂದು ಕೊನೆಯ ಸಲ. ಈ ಸಲಹೆಯನ್ನು ಒಪ್ಪಿಕೊಳ್ಳದೇ ಹೋದರೆ ಕಾಂಗ್ರೆಸ್ ಸೋತುಹೋಗುತ್ತದೆ. ವಿರೋಧ ಪಕ್ಷದವರು ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ ಆದ್ದರಿಂದ ದಯವಿಟ್ಟು ಒಪ್ಪಿಕೊಳ್ಳಿ'' ಎಂದರು. ಆಗ ನಾನು ಹೇಳಿದೆ 'ಈ ಕಮೀಷನ್ನೇ ಕೊನೆಯದು ಅಂತ" ಯಾವ ಗ್ಯಾರಂಟಿ ? ಆವಾಗ ಅವರು ನನ್ನ ಕೈಹಿಡಿದು ಹೇಳಿದರು, ನಾನು ಪ್ರಾಮಿಸ್ ಕೊಡುತ್ತೇನೆ. ಅದು ಯಾವುದೇ ತರಹದ್ದು ರೆಕಮೆಂಡೇಶನ್ಸ್ ಬರಲಿ, ತೀರ್ಪು ಬರಲಿ ಅದನ್ನು ಒಪ್ಪಿಕೊಳ್ಳುತ್ತೇವೆ ಎಂದರು. ಅದರ ನಂತರ ನಾನು ಹೇಳುತ್ತೇನೆ. ಇನ್ನು ಮುಂದೆ ಈ ಬಾರ್ಡರ್ ಇಶ್ಯೂಗೂ ನನಗೂ ಸಂಬಂಧ ಇಲ್ಲ. ನನ್ನನ್ನು ಈ ವಿಚಾರದಲ್ಲಿ ಕೇಳಬೇಡಿ ಎಂದು ಮಹಾರಾಷ್ಟ್ರದ ಜನತೆಗೆ ಹೇಳುತ್ತೇನೆ'' ಎಂದು ಹೇಳಿದರು. ಇದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತರಾವು ಆಯಿತು. ಆದರಲ್ಲಿ ಏನು ಬರೆದಿದ್ದಾರೆಂದರೆ It will be binding on all the parties concerned. ಅಂದರೆ ಕೇಂದ್ರ ಸರ್ಕಾರವನ್ನೂ ಸೇರಿ ಕೇರಳ, ಕರ್ನಾಟಕ, ಮತ್ತು ಮಹಾರಾಷ್ಟ್ರ ಈ ನಾಲ್ಕು ಸರ್ಕಾರಗಳಿಗೆ ಇದು ಬಂಧನಕಾರಿ ಎನ್ನತಕ್ಕದ್ದು ಎಂದು ಅವರು ಹೇಳಿದ್ದಾರೆ. ಶ್ರೀ ಯಶವಂತ್ ಚವಾಣರು ಹೇಳಿದರು ನೀವು ಮತ್ತೊಂದು ಬೆಳಗಾವಿ ಬೇಕಾದರೆ ಮಾಡಿಕೊಳ್ಳಿ ಅದರ ಕಾಂಪನ್ಸೇಶನ್ ಬೇಕಾದರೆ ನಾವು ಕೊಡುತ್ತೇವೆ ಎಂದು. ಆವಾಗ ನಾನು ಹೇಳಿದೆ ಬೆಳಗಾವಿ ಏನು ಮಾರಾಟಕ್ಕೆ ಇಟ್ಟಂಥ ವಸ್ತು ಅಲ್ಲ. ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ ಇದೇನು ಎಲ್ಲಿಯಾದರೂ ನಗರ ಪ್ರದೇಶಗಳ ಮಾರಾಟ ಎರಡು ದೇಶಗಳ ಮಧ್ಯೆ ಆಗತಕ್ಕಂಥ ಒಪ್ಪಂದವೋ ಮಾತುಕತೆಯೋ ? ಆದ್ದರಿಂದ ಇದು ಊಹಿಸಲೂ ಅಸಾಧ್ಯವಾದಂಥ ಒಂದು ಮಾತು. ಮಾನ್ಯ ಪೊಯಿಲಿಯವರು ಹಾಗಾದರೆ ಇದನ್ನು ಏತಕ್ಕೆ ಅಡಗಿ ಸಿಟ್ಟಿದ್ದು ಎಂದು ಕೇಳಿದರು. ಈ ಮನೆಯನ್ನು, ಸದನವನ್ನು ಏತಕ್ಕೆ ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳಲಿಲ್ಲ ಎಂದು. ಇದರಲ್ಲಿ ಏನಾದರೂ ರಹಸ್ಯ ಇದೆಯೇನು ? ಇದರ ಬಗ್ಗೆ ಸ್ವಾಭಾವಿಕವಾಗಿ ಎಷ್ಟು ಉಪಯೋಗ ಮಾಡಿಕೊಳ್ಳಬೇಕೋ ಪೊಲಿಟಿಕಲ್ ಆಗಿ ಅಷ್ಟು ಉಪಯೋಗ ಅವರು ಮಾಡಿಕೊಂಡರು. ಆದರೆ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾದರೆ ಕಮಿಟ್‌ಮೆಂಟ್ ಮಾಡಿಕೊಳ್ಳಬೇಕೋ ಬೇಡವೊ ? ಎಲ್ಲಿಯಾದರೂ ಕಮಿಟ್‌ಮೆಂಟ್ ಮಾಡಿಕೊಳ್ಳಬೇಕಾದರೆ ಈ ಮನೆಯ ಅಥವಾ ಕರ್ನಾಟಕದ ಜನತೆಯ ಕಾನ್‌ಫಿಡೆನ್ಸ್ ತೆಗೆದುಕೊಳ್ಳದೇ ಹೋಗಿ ನಾಡಿದ್ದಾರೆ ಆಗ ಅದು ಅಪರಾಧ ಆಗುತ್ತಿತ್ತು. ಆದರೆ ಇದರಲ್ಲಿ ಕಮಿಟ್‌ಮೆಂಟ್ ಇಲ್ಲ. ಶ್ರೀ ಚವಾಣರಿಗೆ ನಾನು ಈ ಬಗ್ಗೆ ಯೋಚನೆ ಮಾಡುತ್ತೇನೆ ಎಂದು ಕೂಡ ಹೇಳಿಲಿಲ್ಲ. He has not stated that 'Hegde told me that he would consider or his Government would consider''. ಅಂತಹ ಸಂದರ್ಭ ಇದ್ದರೆ ಸ್ವಾಭಾವಿಕವಾಗಿ ಎಲ್ಲಾ ವಿರೋಧ ಪಕ್ಷದ ನಾಯಕರು ಮಾತ್ರ ನಮ್ಮ ಪಕ್ಷದ ನಾಯಕರು ಮತ್ತು ಈ ಕರ್ನಾಟಕ ವಿಕೇಂದ್ರೀಕರಣಕ್ಕಾಗಿ ಎಷ್ಟು ಜನ ದುಡಿದಿದ್ದಾರೆ ಅವರ ಅಭಿಪ್ರಾಯ ಕೇಳದೆ ನಾವು ಅಭಿಪ್ರಾಯ ಕೊಡುವುದು ಹೇಗೆ ಸಾಧ್ಯ ? ಈ ಒಂದು ಸೂಚನೆಯನ್ನು ಕಿರುಗಣ್ಣಿನಿಂದ ನೋಡುವುದಕ್ಕೂ ಸಾಧ್ಯವಿಲ್ಲ. ಅಷ್ಟು ಯೋಗ್ಯತೆಯೂ ಈ ಒಂದು ಸೂಚನೆಗೆ ಇಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟೆ. ಇವತ್ತಾ ಪುನಃ ಈ ಸದನದ ಮುಂದೆ ಪ್ರಸ್ತಾಪವನ್ನು ಮುಂದಿಸಕ್ಕಂಥ ಒಂದೇ ಒಂದು ಕಾರಣ ಏನೆಂದರೆ, ಮಹಾರಾಷ್ಟ್ರದ ಸಮ್ಮ ಸ್ನೇಹಿತರು, ಮಹಾರಾಷ್ಟ್ರದ ಮುಖಂಡರು ಈ ಒಂದು ಹವ್ಯಾಸವನ್ನು ಬಿಡಬೇಕು.

ಬೊನ್ನೆ ನನಗೆ ಬಾಂಬೆಯಿಂದ ೪೫ ಜನ ಮಹಾರಾಷ್ಟ್ರ ಮುಖಂಡರು ಫೋನ್ ಮಾಡಿದರು ನೋಡಿ, ಬೆಳಗಾಂನಲ್ಲಿ ನಾವು ಒಂದು ಸಭೆ ಮಾಡುತ್ತೇವೆಂದು ಹೇಳಿದರೆ ಅದಕ್ಕೆ ನಮಗೆ ಅವಕಾಶ ಕೊಡುತ್ತಾ ಇಲ್ಲ. ನೀವು ೧೫ಳಿಗೆನೇ ಸೆಕ್ಷನ್ ಹಾಕುತ್ತೀರಿ. ಇದು ಒಂದು ಸ್ವತಂತ್ರವಾದ ದೇಶವೇ, ಡೆಮಾಕ್ರಸಿಯೇ. ನಾವು ಪೀಸ್‌ಫುಲ್ ಆಗಿ ಸಭೆ ಮಾಡುತ್ತೇವೆಂದು ಹೇಳಿದರೂ ನೀವು ಅವಕಾಶ ಕೊಡುವುದಿಲ್ಲವೆಂದು ಹೇಳುತ್ತೀರಿ ಎಂದರು. ಅಷ್ಟರೊಳಗೆ ನಮ್ಮ ಗೃಹ ಮಂತ್ರಿಗಳ ಹತ್ತಿರ ಮಾತನಾಡಿ, ಬೆಳಗಾಂ ಬಿಟ್ಟು ಬೇರೆ ಎಲ್ಲಿಯಾದರೂ ಮಾಡಿಕೊಂಡು ಹೋಗಲಿ, ನಾವು ಇದಕ್ಕೆ ಪತ್ರ ಕೊಡುವುದು ಬೇಡ ಎಂದು ತೀರ್ಮಾನಿಸಿದೆವು. ಅವರೇ ಖಾನಾಪುರ ಊರಿನಲ್ಲಿ ಮಾಡಿಕೊಂಡು ಹೋಗಬಹುದೇ

ವೆಂದು ಹೇಳಿದರು. ಬೇರೆ ಎಲ್ಲಾದರೂ ಮಾಡಿಕೊಳ್ಳಲಿ, ಆದರೆ ಈ ಸಭೆ ಮಾಡಾವುದಕ್ಕೆ, ಆಗಲೀ ಮಾಡದ ಹಾಗೆ, ಹಲ್ಲೆ ಮಾಡದಹಾಗೆ ಪ್ರೊಟೆಕ್ಷನ್ ಕೊಡಬೇಕು, ಅದು ನಮ್ಮ ಕರ್ತವ್ಯ, ಅವರು ವಿಚಾರ ಹೇಳಲಿ. ಬಂದಿದ್ದಾರೆ ಅವರು ನಾನು ಹೇಳಿದೆ, ನೋಡಿ, ಬೆಳಗಾವಿನಲ್ಲಿ ಮಾಡುವುದಕ್ಕಾಗುವುದಿಲ್ಲ, ಏಕೆಂದರೆ, ಈಗಾಗಲೇ ನಮಗೆ ಹೋದವರ್ಷದಿಂದ ಆಗಿರುವ ಅನುಭವ. ಬಾಂಬೆಯಿಂದ, ಪೂನಾದಿಂದ, ಕೊಲ್ಲಾಪುರದಿಂದ ಜನ ಬಂದು, ಇಲ್ಲಿಯ ಮುಗ್ಧ ಜನರಿಗೆ ಉತ್ತೇಜನ ಕೊಟ್ಟು, ಅವರನ್ನು ಕೆರಳಿಸಿ, ಯಾವ ಅನಾಹುತವನ್ನು ಮಾಡುವುದಕ್ಕೆ ಕಾರಣ ಆಯಿತೋ, ಅದನ್ನು ಪುನಃ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಅವರು ಶಾಂತಿಯುತವಾಗಿ ಮಾಡಿಕೊಳ್ಳುತ್ತೇವೆಂದು ಹೇಳಿದರೆ, ಬೇರೆ ಕಡೆ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ನಾನು ಇದೇ ಸಂದರ್ಭದಲ್ಲಿ ಒಂದು ಮೆಚ್ಚುಗೆಯನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಬೆಳಗಾವಿನಲ್ಲಿ ಕನ್ನಡ ಮಾತನಾಡತಕ್ಕ ಕನ್ನಡಿಗರು ಏನಿದ್ದಾರೆ, ಅವರು ಎಂದೂ ಹಿಂಸಾಚಾರಕ್ಕೆ ಇಳಿದವರಲ್ಲ. ಯಾರು ಹೊಡೆದರೂ ಹೊಡೆಸಿಕೊಂಡಿದ್ದಾರೆ, ಅಂಗಡಿ ಮತ್ತು ಮನೆಗಳನ್ನು ಲೂಟಿ ಮಾಡಿಸಿಕೊಂಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಪೋಲೀಸರ ಲಾಟಿ ಚಾರ್ಜನ್ನು ಎದುರಿಸಿದ್ದಾರೆ. ಆದರೆ ಅಲ್ಲಿರತಕ್ಕ ಮರಾಠಿ ಮಾತನಾಡತಕ್ಕ ಜನರಲ್ಲಿ ಹೊರಗಡೆಯಿಂದ ಬಂದಂಥ ಜನ ಏನೇನೋ ಹೇಳುತ್ತಾರೆ. ಕೊಲ್ಲಾಪುರ ದಿಂದ, ಸಾಸಿಕ್‌ನಿಂದ, ಅಥವಾ ಬಾಂಬೆಯಿಂದ ಅವರು ಬಂದಿರಬಹುದು. ಹೊರಗಡೆಯಿಂದ ಬಂದು ಉದ್ರೇಕ ಮಾಡತಕ್ಕಂಥ ಕೆಲವು ಜನರು ಏನಿದ್ದಾರೆ, ಅವರು ಬಂದಾಗ ಮಾತ್ರ ಶಾಂತಿಭಂಗ ಆಗುತ್ತದೆಯೇ ಹೊರತು, ಅದಿಲ್ಲದೇ ಇದ್ದರೆ ಶಾಂತಿಭಂಗ ಬೆಳಗಾವಿನಲ್ಲಿ ಆಗಿಲ್ಲ. ಒಂದುವೇಳೆ ಏನಾದರೂ ಚಳುವಳಿ ಮಾಡುತ್ತೇವೆ ಎಂದರೂ, ಪಿರೋಧ ಪ್ರದರ್ಶನ ಮಾಡುತ್ತೇವೆಂದು ಮಾಡಿದರೂ, ಹೊರಗಡೆಯವರು ಇಲ್ಲದೇ ಇದ್ದಾಗ ಯಾವುದೇ ಒಂದು ಶಾಂತಿ ಭಂಗ ಆಗಿಲ್ಲ. ಇದರ ಅರ್ಥ ಏನೆಂದರೆ ಬೆಳಗಾವಿನಲ್ಲಾಗಲೀ, ನಮ್ಮ ಗಡಿ ಭಾಗದಲ್ಲಾಗಲೀ, ನಿಪ್ಪಾಣಿಯಲ್ಲಾಗಲೀ ಏನಾದರೂ ಶಾಂತಿ ಭಂಗ ಆದರೆ, ಅಲ್ಲಿ ಹಿಂಸಾಚಾರ ಆದರೆ, ಸಾರ್ವಜನಿಕ ಆಥವಾ ಖಾಸಗಿ ಆಸ್ತಿಪಾಸ್ತಿಗಳಲೂಟಿ ಆದರೆ ಆಥವಾ ಅದನ್ನು ಹಾಳು ಮಾಡಿದರೆ ಅದಕ್ಕೆ ಕಾರಣ ಹೊರಗಡೆಯಿಂದ ಬಂದಂಥ ಮಹಾರಾಷ್ಟ್ರ ಮುಖಂಡರು. ದಯವಿಟ್ಟು ಅವರು ಬರುವುದನ್ನು ನಿಲ್ಲಿಸಿದರೆ, ನನಗೆ ವಿಶ್ವಾಸ ಉಂಟು, ಈ ಕರ್ನಾಟಕದಲ್ಲಿರತಕ್ಕಂಥ ಪ್ರತಿಯೊಬ್ಬ ಮರಾಠಿ ವ್ಯಕ್ತಿಯ ಹಿಂದೆ ನಾವು ಇದ್ದೇವೆ. ಏಕೆಂದರೆ, ನಮ್ಮ ನೀತಿ ಹಾಗೆಯೇ. ಇಷ್ಟನ್ನವರೆಗೆ ಕನ್ನಡ ಮಾತನಾಡುವವರಿಗೆ ಯಾವರೀತಿಯ ಪ್ರೀತಿಯನ್ನು, ಉಪಚಾರವನ್ನು ಮಾಡುತ್ತೇವೆ ಅಷ್ಟೇ ಪ್ರೀತಿಯನ್ನು, ಉಪಚಾರವನ್ನು ಮರಾಠಿ ಮಾತನಾಡುವವರಿಗೂ ಕೊಡುತ್ತಿದ್ದೇವೆ. ಏಕೆಂದರೆ, ಅವರು ಇಲ್ಲಿ ಸಾವಿರಾರು ವರ್ಷಗಳಿಂದ ನಮ್ಮ ಒಟ್ಟಿಗೇ ಬಂದಿದ್ದಾರೆ. ಸಹಸ್ರಾರು ವರ್ಷಗಳಿಂದ ಒಟ್ಟಿಗೇ ಕೆಲಸ ಮಾಡಿಕೊಂಡು ಬಂದಿದ್ದಾರೆ ಕೃತ್ರಿಮವಾದ ಭಾಷೆಯ, ಭಾಷಾಂಧತೆಯ ವಿಷವನ್ನು ಹಬ್ಬಿಸುತ್ತಿರುವವರು ಮಹಾರಾಷ್ಟ್ರದಿಂದ ಬಂದಂಥವರು. ಇವರಿಂದ ಅಲ್ಲಿಯ ವಾತಾವರಣ ಕಲುಷಿತವಾಗಿದೆಯೇ ಹೊರತು ಅಲ್ಲಿಯಸ್ಥಾನಿಕ ಜನರಿಂದ ಅಲ್ಲ. ಆದ್ದರಿಂದ ನಾನು ಅವರಿಗೆ ಹೇಳುತ್ತೇನೆ, for God's sake.....ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಿ. ಪುನಃ ಇಲ್ಲಿಗೆ ಬಂದು ಇಲ್ಲಿಯ ವಾತಾವರಣವನ್ನು ಕೆಡಿಸಬೇಡಿ.

ಇದರಿಂದ ನಿಮಗೂ ಲಾಭ ಇಲ್ಲ. ನಾವಿಬ್ಬರೂ ಸೇರಿ ಪರಸ್ಪರ ಸಹಕಾರದಿಂದ ಶಾಂತಿಯುತ ವಾದಂಥ ವಾತಾವರಣದಲ್ಲಿ ಎರಡೂ ರಾಜ್ಯಗಳ ಅಭಿವೃದ್ಧಿಗಾಗಿ ಪ್ರಯತ್ನ ಮಾಡೋಣ ಎಂದು ಹೇಳಿದ್ದೇನೆ. ನಾನು ಮಾನ್ಯ ಚವಾಣರಿಗೆ ನಮ್ಮ ಸರಕಾರದ ಪರವಾಗಿ ಒಂದು ಮಾತನ್ನು ಕೊಟ್ಟಿದ್ದೇನೆ. ಮಹಾರಾಷ್ಟ್ರ ಗಡಿ ಒಳಗಡೆ ಇರತಕ್ಕಂಥ ಕನ್ನಡಿಗರಿಗೆ ಅಲ್ಲಿಯ ಸರಕಾರ ಯಾವ ಯಾವ ಸವಲತ್ತನ್ನು ಕೊಡುತ್ತದೆಯೋ ಆ ಸವಲತ್ತುಗಳನ್ನು ಕರ್ನಾಟಕದ ಗಡಿಯ ಒಳಭಾಗದಲ್ಲಿರತಕ್ಕಂಥ ಮರಾಠಿ ಮಾತನಾಡತಕ್ಕಂಥ ಮರಾಠಿ ಮಾತೃ ಭಾಷೆಯಾಗಿರತಕ್ಕಂಥ ಜನರಿಗೆ ನಾವು ಕೊಡುತ್ತೇವೆ. ಇದು ಸಮಂಜಸವಾದುದೆಂ ಎಂದು ನನ್ನ ಭಾವನೆ. ಇಷ್ಟರಮಟ್ಟಿಗೆ ಉದಾರತೆ ನಮಗಿರಬೇಕು. ಅವರು ತಮ್ಮ ಮಕ್ಕಳನ್ನು ತಮ್ಮ ಮಾತೃಭಾಷೆಯಲ್ಲಿ ಸ್ಕೂಲ್‌ನಲ್ಲಿ ಓದಿಸುತ್ತಾರೆ ಎಂದರೆ ಅದಕ್ಕೆ ಅಡ್ಡಿಮಾಡತಕ್ಕಂಥದ್ದು ಸರಿಯಲ್ಲ. ಯಾವರೀತಿ ನಮ್ಮ ಮಕ್ಕಳು ಕನ್ನಡದಲ್ಲಿ, ಕನ್ನಡ ಶಾಲೆಯಲ್ಲಿ ಓದಬೇಕೆಂದು ಬಯಸುತ್ತೇವೆಯೋ ಅದೇ ಅನುಕೂಲತೆಯೆಂನ್ನು ನಾವು ಅವರ ಮಕ್ಕಳಿಗೂ ಮಾಡಿಕೊಡತಕ್ಕದ್ದು ನಮ್ಮ ಧರ್ಮ ಮತ್ತು ಇದು ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಹಿಂದೆ ೧೯೬೨ ರಲ್ಲಿ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಆದಂಥ ಒಂದು ನಿರ್ಣಯಕ್ಕೆನುಗುಣವಾಗಿದೆ. ಈಗ ಕೇರಳದಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನು ಹೇಳಿದರೆ ಇದರಿಂದ ನಮ್ಮ ಕೇಸ್ ಒಂದು ದೃಷ್ಟಿಯಿಂ

ವೀಕ್ ಆಗುತ್ತದೆ. ಕೇರಳದಲ್ಲಿ ಏನು ಮಾಡುತ್ತಿದ್ದಾರೆ, ಎಂದರೆ. ಅಲ್ಲಿ ಕನ್ನಡ ಮಾಧ್ಯಮದಲ್ಲಿ ಯಾರು ಯಾರು ಕಲಿಯುತ್ತಾರೋ ಅವರಿಗೆ ಎಲ್ಲ ಸವಲತ್ತನ್ನು ಕೊಟ್ಟಿದ್ದಾರೆ. ಕನ್ನಡ ಮಾತನಾಡತಕ್ಕಂಥವರಿಗೆ ನೌಕರಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗೂ ಇನ್ನಿತರ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ. ಆದುದರಿಂದ ಏನಾಗುತ್ತದೆ ಎಂದರೆ ನಮ್ಮ ಕೇಸ್ ವೀಕ್ ಆಗುತ್ತಿದೆ. ಅಲ್ಲಿಯ ಕನ್ನಡಿಗರು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳತಕ್ಕಂಥ ಒಂದು ಚಿನ್ನೆ ನಮಗೆ ಕಾಣುತ್ತಿದೆ. ಅದೇ ರೀತಿ ನಮ್ಮ ಕರ್ನಾಟಕ ಗಡಿಯ ಒಳಗಿರತಕ್ಕಂಥ ಮರಾಠಿ ಮಾತನಾಡತಕ್ಕಂಥ ಜನರನ್ನು ನಾವು ಒಳ್ಳೆಯ ರೀತಿಯಿಂದ ನೋಡಿಕೊಳ್ಳುತ್ತೇವೆ. ಅವರ ಯಾವುದೇ ಒಂದು ಸಂಸ್ಕೃತಿಗೆ, ಭಾಷೆಗೆ ಮತ್ತು ಇನ್ನಿತರ ಯಾವುದೇ ಒಂದು ಸಾಮಾಜಿಕ ಚಟುವಟಿಕೆಗೆ ನಾವು ಭಂಗ ತರುವುದಿಲ್ಲ. ನಾವು ನಮ್ಮ ಕರ್ನಾಟಕದ ಜನರಿಗೆ ಅವರು ಯಾವ ಒಂದು ಸೌಲಭ್ಯವನ್ನು ಕೊಡುತ್ತಾರೋ ಅದೇ ಒಂದು ಸೌಲಭ್ಯವನ್ನು ಅವರಿಗೂ ಕೊಡುತ್ತೇವೆ. ಆದುದರಿಂದ ಇನ್ನು ಮುಂದೆ ಈ ಗಡಿ ವಿಚಾರದಲ್ಲಿ, ಅದರಲ್ಲಿಯೂ ಬೆಳಗಾಂನಲ್ಲಿರತಕ್ಕಂತ ಹಾಗೂ ಬೆಳಗಾವಿಯ ಸುತ್ತ ಮುತ್ತ ಇರತಕ್ಕಂಥ ಮರಾಠಿ ಬಾಂಧವರಲ್ಲಿ ನಾನು ಹೃತ್ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ನೀವು ಹೊರಗಡೆಯಿಂದ ಬರತಕ್ಕಂತ ಜನರ ಮಾತಿಗೆ ಮರುಳು ಬೀಳಬೇಡಿ, ಅವರು ನಿಮ್ಮ ಮಿತ್ರರಲ್ಲ, ನಿಮ್ಮ ಶತ್ರುಗಳು ಎಂದು ತಿಳಿದುಕೊಳ್ಳಿ. ಇಷ್ಟನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) —ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂಥ ನಿರ್ಣಯಕ್ಕೆ ನಾನು ಅನುಮೋದನೆ ನೀಡಿ, ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ ಅವರು ಈಗಾಗಲೇ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತು ಕೆಲವು ವಿಷಯಗಳನ್ನು ಸ್ಪಷ್ಟಪಡಿಸಿದ್ದಾರೆ. ಆದರೆ ಈ ನಿರ್ಣಯ ತರಲಿಕ್ಕೆ ಕಾರಣ ಏನು? ಮಂಡಿಸುವಾಗ ಇದೇ ೧೬ನೇ ತಾರೀಖು ಶ್ರೀಮಾನ್ ಎಸ್. ಬಿ. ಚವಾಣ್‌ರವರು ಏನು ಅಸೆಂಬ್ಲಿಯಲ್ಲಿ ಒಂದು ನಿರ್ಣಯವನ್ನು ಶ್ರೀಮಾನ್ ಪವಾರ್ ಅವರ ಮುಖಾಂತರ ಮಂಡಿಸಿ ಆದಕ್ಕೆ ಬೆಂಬಲ ಸೂಚಿಸುವಾಗ, ಬೆಳಗಾವಿಯನ್ನು ನೂರು ಕೋಟಿ ರೂಪಾಯಿಗಳಲ್ಲಿ ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅದು ಕಂಪೆನ್‌ಸೇಷನ್ ಮುಖಾಂತರ ಇರಬಹುದು ಅಥವಾ ಹೊಸ ಒಂದು ನಗರವನ್ನು ಕಟ್ಟಿ ನಿಮಗೆ ಕೊಡುತ್ತೇವೆ ಎನ್ನುವ ದೃಷ್ಟಿಯಿಂದ ಹೇಳಿರಬಹುದು. ಆದರೆ ಈ ಮಾತನ್ನು ಕರ್ನಾಟಕದಲ್ಲಿರತಕ್ಕಂಥ ಎಲ್ಲ ಜನರೂ ಖಂಡಿಸಿದ್ದಾರೆ. ಕೇವಲ ಶಾಸಕರಷ್ಟೇ ಅಲ್ಲ ಗಡಿಭಾಗದಲ್ಲಿರತಕ್ಕಂಥ ಜನರು ಮತ್ತು ಅನೇಕ ವಿತ್ರರು, ಪತ್ರಕರ್ತರು ಕೂಡ ಅವರ ಹೇಳಿಕೆಯನ್ನು ಖಂಡಿಸಿದ್ದಾರೆ. ಆದರೆ ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದಾಗೆ ಈ ವಿಷಯ ಆ ಸದನದಲ್ಲಿ ಬಂದಮೇಲೆ ನಮಗೆ ಗೊತ್ತಾಯಿತು. ಅಂದರೆ ಬೆಳಗಾವಿಯನ್ನು ನೂರು ಕೋಟಿ ರೂಪಾಯಿಯಲ್ಲಿ ನಾವು ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದಮೇಲೆ ನಾವು ಸ್ವಲ್ಪ ವಿಚ್ಛಿದ್ರವಾದೆವು. ಆದರೆ ಅವರು ಬೂಟಾಸಿಂಗ್ ಅವರ ಹತ್ತಿರ ಮೊದಲೇ ಈ ಪ್ರೊಪೋಸಲ್ ಕೊಟ್ಟಿದ್ದರು. ಬೂಟಾಸಿಂಗ್‌ರವರು ಒಂದೆರಡು ಸಲ ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರಿಗೆ ಕರೆಸಿದ್ದರು. ಆದರೆ ಅವರು ಈ ಮಿಟಿಂಗ್‌ಗೆ ಹಾಜರಾಗಲಿಲ್ಲ ಎಂಬ ಮಾತನ್ನು ಚವಾಣ್ ಅವರು ಹೇಳಿದ್ದಾರೆ. ಈ ಸೂಚನೆ ಮುಖ್ಯಮಂತ್ರಿಯವರಿಗೆ ಬಂದ ತಕ್ಷಣ ಅವರು ಇದನ್ನು ಖಂಡಿಸಬಹುದಾಗಿತ್ತು ಆದರೆ ವಿತಕ್ಕೆ ಹಾಗೆ ಮಾಡಲಿಲ್ಲ ಎಂಬ ಒಂದು ಸಂಶಯವಿದೆ. ಈಗೇನೋ ಅವರು ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಯಾವ ರೀತಿಯಲ್ಲಿ ನಾವು ಬೆಳಗಾವಿಯನ್ನು ಬಿಟ್ಟುಕೊಡುವುದಿಲ್ಲ ಎನ್ನತಕ್ಕಂಥ ವಿಶ್ವಾಸವನ್ನು ಕೊಟ್ಟಿದ್ದಾರೆ. ನನಗನಿಸಿದ ಮಟ್ಟಿಗೆ ಶ್ರೀಮಾನ್ ಬೂಟಾಸಿಂಗ್‌ರವರಿಗೆ ಅವರು ಪ್ರೊಪೋಸಲ್ ಕೊಟ್ಟಿದ್ದರು ಆ ಪ್ರಕಾರ ಶ್ರೀಮಾನ್ ಬೂಟಾಸಿಂಗ್‌ರವರು ಒಂದೆರಡು ಸಲ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀರಾಮಕೃಷ್ಣ ಹೆಗಡೆಯವರನ್ನು ಕರೆಯಿಸಿದರು. ಆದರೆ ತಾವು ಆ ಮಿಟಿಂಗ್‌ಗೆ ಹಾಜರಾಗಲಿಲ್ಲ ಮತ್ತು ಕೊನೆಘಳಿಗೆಯಲ್ಲಿ ಮಹಾರಾಷ್ಟ್ರದಿಂದ ಈ ಸೂಚನೆ ಬಂದ ಮೇಲೂ ಮಾನ್ಯ ಮುಖ್ಯ ಮಂತ್ರಿಗಳು ಖಂಡಿಸಲಿಲ್ಲ. ಅದಕ್ಕೆ ನಮಗೆ ಸ್ವಲ್ಪ ಸಂಶಯ ಬಂತು. ಈಗ ಈ ಸಭೆಯಲ್ಲಿ ತಮ್ಮ ನಿಲುವನ್ನು ಸ್ಪಷ್ಟ ಪಡಿಸಿದ್ದಾರೆ. ನಮಗೆ ವಿಶ್ವಾಸ ಬಂದಿದೆ, ಈ ಸದನದ ಯಾವ ಪಕ್ಷದವರೇ ಆಗಿರಲಿ, ಎಲ್ಲರೂ ಒಮ್ಮತದಿಂದ ಎರಡು ಸಲ ನಿರ್ಣಯವನ್ನು ಮಂಡಿಸಿ ಒಪ್ಪಿಕೊಂಡಿದ್ದೇವೆ. ಪುನಃ ಇಂತಹ ನಿರ್ಣಯವನ್ನು ತರತಕ್ಕಂಥ ಕೆಲಸವಾಗಬಾರದು. ಇಡೀ ಕರ್ನಾಟಕ ರಾಜ್ಯದ ಜನತೆಯು, ಈ ಸದನದ ತೀರ್ಮಾನ ಒಂದೇ ಆಗಿದೆ. ಆದರೆ ನಮ್ಮ

ಮಹಾರಾಷ್ಟ್ರದಲ್ಲಿರಕ್ಕಂಥ ಕೆಲವು ಮಿತ್ರರು ಅವರು ಜನತಾಪಕ್ಷದಲ್ಲಿರಬಹುದು ಕಾಂಗ್ರೆಸ್ ಪಕ್ಷದಲ್ಲಿರಬಹುದು ಅವರ ಹಿತದೃಷ್ಟಿಯಿಂದ ಪದೇ ಪದೇ ಈ ವಿಷಯವನ್ನು ಕೆಣಕುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದಹಾಗೆ ಚುನಾವಣೆ ಸಮಯ ಬಂದಾಗ ಇದಕ್ಕೆ ಹೆಚ್ಚು ಪ್ರೋತ್ಸಾಹವನ್ನು ಅವರು ಕೊಡುತ್ತಾರೆ. ಅವರು ಚುನಾವಣೆ ಸಮಯದಲ್ಲಿ ಬೆಳಗಾಂಗೆ ಬಂದು ಮಿಟಿಂಗ್ ಮಾಡಬಹುದು. ಕೊಲ್ಲಾಪುರದಲ್ಲಿ ಮಿಟಿಂಗ್‌ಗಳನ್ನು ಮಾಡಬಹುದು ಮತ್ತು ಸಮ್ಮ ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಿಟಿಂಗ್‌ಗಳನ್ನು ಮಾಡತಕ್ಕಂಥ ಕೆಲಸವನ್ನು ಅದರಲ್ಲೂ ಚುನಾವಣೆ ಸಮಯದಲ್ಲಿ ಪದೇ ಪದೇ ಮಾಡುತ್ತಿರುತ್ತಾರೆ. ಅದಕ್ಕೆ ನಾವು ಯಾರೂಕೂಡ ಬಲಿಯಾಗಬಾರದು. ಆ ಒಂದಂ ದಿಸೆಯಲ್ಲಿ ವಿರೋಧಪಕ್ಷದ ನಾಯಕರು ಇಂತಹ ಒಂದಂಮಾತನ್ನು ಆಡಿದರು. ಎಲ್ಲಿ ಬೆಳಗಾಂ ಅನ್ನು ಅವರಿಗೆ ಬಿಟ್ಟುಕೊಡುವ್ರೋ ಏನ್ನುವ ಭಯದಿಂದ ಅಂತಹ ಒಂದು ಆಪಾದನೆಯಂನ್ನು ನಾವು ಮಾಡಬೇಕಾಯಿತು ಅವರು ಅಂತಹ ಹೇಳಿಕೆಯನ್ನು ಕೊಟ್ಟರೂ ಸಹ ನಾವು ಅದನ್ನು ಖಂಡಿಸಲಿಲ್ಲ. ಆದಕ್ಕೆ ನಮಗೆ ಸಂಶಯ ಬಂತು. ಇವತ್ತು ನಾವು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೀರಿ. ಎರಡನೆಯದಾಗಿ ನಮ್ಮ ಮಹಾರಾಷ್ಟ್ರದ ಮುಖಂಡರು ಏನು ಹೇಳಿದ್ದಾರೆಂದರೆ ಎಲ್ಲೆಲ್ಲಿ ಗಡಿ ಭಾಗಗಳು ಬರುತ್ತವೆಯೋ ಅಲ್ಲಿ ಕಡಿಮುಯವ ನೀರು, ವಿದ್ಯುಚ್ಛಕ್ತಿ ಇವುಗಳನ್ನು ನಿಲ್ಲಿಸೋಣವೆಂದು ಸಭೆ ಮಾತನಾಡಿದ್ದಾರೆ. ಆ ರೀತಿ ಮಾಡಿದರೆ ಆಗ ಈ ಸಮಸ್ಯೆ ಪರಿಹಾರವಾಗುತ್ತದೆಂದು ಮಾತನಾಡಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಏನಾದರೂ ದೂರುಗಳು ಬಂದಿದ್ದರೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಅವರೇನಾದರೂ ಆ ರೀತಿ ಮಾಡಿದರೆ ಟಿಟ್ ಫಾರ್ ಟ್ಯಾಟಿನ್ನು ನಾವು ಮಾಡಬೇಕಾಗುತ್ತದೆ ಅದಕ್ಕೆ ದಯವಾಡಿ ತಾವು ಆ ರೀತಿ ಏನಾದರೂ ಮಾಡಿದರೆ ಖಂಡಿಸಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ನಿರ್ಣಯವನ್ನು ಅನುಮೋದಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ(ಕಾರ್ಕಳ).– ಸನ್ಮಾನ್ಯ ಅಧ್ಯಕ್ಷರೇ ಈ ಗಡಿ ಸಮಸ್ಯೆ ಈ ಸದನದಲ್ಲಿ ಮೂರನೇ ಸಾರಿ ನಿರ್ಣಯವನ್ನು ಮಾಡುತ್ತಿದ್ದೇವೆ. ೧೯೭೭ನೇ ಇಸವಿಯಲ್ಲಿ ಒಮ್ಮೆ ನಿರ್ಣಯ ಮಾಡಿತು. ಆಮೇಲೆ ೧೯೭೧ನೇ ಇಸವಿಯಲ್ಲಿ ಆಯಿತು. ಆದಾದ ಮೇಲೆ ೧೭ ವರ್ಷಗಳ ನಂತರ ನಾವು ಈ ನಿರ್ಣಯವನ್ನು ಮಾಡುತ್ತಿದ್ದೇವೆ ಇಂತಹ ಒಂದು ಸಂಧಿಗ್ಧ ಪರಿಸ್ಥಿತಿ ಉಂಟಾಗಿದೆ. ನಾನೊಂದು ಆಶಿಸುತ್ತೇನೆ ಇದೇ ಕೊನೆಯ ನಿರ್ಣಯವಾಗಬೇಕು. ಏತಕ್ಕೆಂದರೆ ಈ ಒಂದು ಗಡಿ ವಿಷಯ ಜನರಲ್ಲಿ ಒಂದು ಸಂದಿಗ್ಧತೆಯನ್ನು ರೂಪಿಸತಕ್ಕಂಥ ವಿಷಯ. ಇದು ರಾಜ್ಯಗಳ ಹಿತದೃಷ್ಟಿಯಿಂದ ರಾಷ್ಟ್ರದ ಹಿತದೃಷ್ಟಿಯಿಂದ ಕೂಡ ಒಳ್ಳೆಯದಲ್ಲ. ಇದಕ್ಕೆ ಒಳ್ಳೆಯ ಚಾರಿತ್ರಿ ಇದೆ. ಈ ಬಗ್ಗೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ವರ್ಣಿಸಿ ಹೇಳಿದ್ದಾರೆ. ಪುನಃ ನಾನು ಅದನ್ನೆ ಉದ್ಧರಿಸಲು ಹೋಗುವುದಿಲ್ಲ. ಯಾವ ಒಂದು ದೃಷ್ಟಿಯಿಂದ ನೋಡಿದರೂ ಬೆಳಗಾಂ ನಗರ ಮಹಾರಾಷ್ಟ್ರದಪರ ಮನಸ್ಸಿನಲ್ಲಿ ಕೇಂದ್ರೀಕೃತವಾಗಿದೆ. ಅಂದಿನ ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀಮಾನ್ ವಿ. ಪಿ. ನಾಯಕ್‌ರಪರ ಕಾಲದಿಂದಲೂ ಇವತ್ತಿನವರೆಗೂ ಇದನ್ನು ಒಂದು ರಾಜಕೀಯ ಬಂಡವಾಳವನ್ನಾಗಿ ಮಾಡಿಕೊಂಡು ಮಾತನಾಡುತ್ತಿದ್ದಾರೆ.

ಐತಿಹಾಸಿಕವಾಗಿಯೂ ಅಥವಾ ಭೌಗೋಳಿಕವಾಗಿಯೂ ಮತ್ತು ಪರಂಪರಾನುಗತವಾಗಿಯೂ ಕೂಡ ಅವಿಭಾಜ್ಯ ಅಂಗವಾದ ಬೆಳಗಾಮ್‌ನ್ನು ಇನಶ್ಯು ಬಿಟ್ಟುಬಿಡಬೇಕೆಂದು ಹೇಳಿದರೆ ಅದು ನೀತಿಯುತವಾದ ಮಾತಾಗುವದಿಲ್ಲ. ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳವರು ಖುತಳ ಚೆನ್ನಾಗಿ ಉತ್ತರ ಹೇಳಿದರು, ದೇಹದಲ್ಲಿರುವ ತ್ವಾಸಕೋಶ ಎರಡು ಭಾಗವನ್ನು ಹೊಂದಿರುತ್ತದೆ. ಎರಡು ಭಾಗವನ್ನು ಬೇರೆ ಬೇರೆ ಮಾಡಿದರೆ ಏನಾಗುತ್ತದೋ ಅದೇ ರೀತಿ ಬೆಳಗಾಮ್‌ನ್ನು ಬೇರೆ ಮಾಡಿದರೆ ಆಗುತ್ತದೆಂದು ಹೇಳಿದ್ದಾರೆ. ಇದು ನಿಜವಾಗಿ ಕನ್ನಡಿಗರ ಧ್ವನಿಯನ್ನು ಉದ್ಧರಿಸಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಯವರ ಅಭಿಪ್ರಾಯವೇ ನಮ್ಮೆಲ್ಲರ ಅಭಿಪ್ರಾಯವೂ ಕೂಡ ಆಗಿದೆ. ವಿಕೆಂದರೆ ಮಹಾಜನ್ ಕಮಿಷನ್ ನೇಮಕವಾದಂಥ ಹಿನ್ನೆಲೆಯಲ್ಲಿ ಈ ವಿಚಾರ ಪದೇ ಪದೇ ಬರಬಾರದು. ಇವತ್ತಿಗೆ ಇದೇ ಅಂತಿಮ ತೀರ್ಮಾನವಾಗಬೇಕು. ಏಕೆಂದರೆ, ರಾಷ್ಟ್ರದಲ್ಲಿ ಭಾಷಾಂದತೆ ದ್ವೇಷ, ರಾಜ್ಯಗಳನ್ನು ಒಡೆಯತಕ್ಕಂಥ ಸಂಘರ್ಷಣೆ ತರತಕ್ಕಂಥ ಮಾತುಗಳಿಗೆ ಅಂತಿಮ ಗೆರೆಯನ್ನು ಇವತ್ತು ನಾವು ಹಾಕಬೇಕು. ಮಹಾಜನ್ ಕಮಿಷನ್ ವರದಿ ಕೊಟ್ಟ ಮೇಲೆ ನ್ಯಾಯ

ವಾದಂಥ ತೀರ್ಮಾನವನ್ನು ಅನುಷ್ಠಾನ ಮಾಡಿದೆ ಪದೇ ಪದೇ ಗಡಿ ಬಗ್ಗೆ ಮಾತನಾಡುವುದು ಅವರಿಗೆ ಸಲ್ಲತಕ್ಕ ಮಾತಲ್ಲ. ನಮ್ಮ ಕರ್ನಾಟಕಕ್ಕೆ ಕಾನೂನುಗೋಡು ನ್ಯಾಯವಾಗಿ ಬರಬೇಕಾಗಿದೆ, ನಾನು ಸನ್ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಕನ್ನಡಿಗರ ಪರವಾಗಿ ಧ್ವನಿಯನ್ನು ತಾವು ಎತ್ತಿದ್ದೀರಿ, ಇನ್ನು ಮುಂದೆ ಗಡಿ ವಿಷಯವಾಗಿ ಚರ್ಚೆ ಮಾಡುವುದಕ್ಕೆ ಡೆಲ್ಲಿಗೆ ಹೋಗಬೇಕಾಗಲೀ, ಮುಂಬಯಿಗೆ ಹೋಗಬೇಕಾಗಲೀ ಆಗ ತಾವು ಈಗ ಏನು ಕನ್ನಡಿಗರ ಪರವಾಗಿ ಮಾತನಾಡಿದ್ದೀರೋ ಅದೇ ರೀತಿ ಅಲ್ಲಿಯೂ ಮಾತನಾಡಬೇಕೆಂದು ಅಧ್ಯಕ್ಷರ ಮುಖೇನ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಹಾರಾಷ್ಟ್ರದಲ್ಲಿ ಕಾಂಗ್ರೇಸ್ ಸರ್ಕಾರವೇ ಇರಬಹುದು, ಯಾವುದೇ ಪಕ್ಷದ ಸರ್ಕಾರ ಇರಬಹುದು. ಅದು ನಮಗೆ ಮುಖ್ಯ ಅಲ್ಲ. ನಾನು ಒಂದು ಸಾರಿ ಪ್ರಧಾನ ಮಂತ್ರಿಯವರನ್ನು ಕಾಣುವುದಕ್ಕೆ ಹೋಗಿದ್ದಾಗ ಮಹಾರಾಷ್ಟ್ರದ ಶರದ್‌ಪವಾರ್‌ರವರು ಸಹ ಪ್ರಧಾನ ಮಂತ್ರಿಯವರನ್ನು ಕಾಣುವುದಕ್ಕೆ ಬಂದಿದ್ದರು. ಶರದ್‌ಪವಾರ್‌ರವರು ಪ್ರಧಾನ ಮಂತ್ರಿಯವರ ಹತ್ತಿರ ಬೆಳಗಾಮ್ ಬಗ್ಗೆ ಮಾತನಾಡಿದ್ದರು ಎಂದು ಕಾಣುತ್ತದೆ. ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುವುದಕ್ಕೆ ನನ್ನ ಸರದಿ ಬಂದಾಗ ನಾನು ಅವರನ್ನು ಕಂಡು ಮಾತನಾಡಿದೆ. ಆ ಸಂದರ್ಭದಲ್ಲಿ ಬೆಳಗಾಮ್ ಬಗ್ಗೆ ಪ್ರಧಾನಮಂತ್ರಿಯವರು ಮಹಾಜನ್ ಆಯೋಗ ಏನು ವರದಿ ಕೊಟ್ಟಿದೆಯೋ ಅದನ್ನು ಎಲ್ಲರೂ ಒಪ್ಪತಕ್ಕದ್ದೆಂದು ಹೇಳಿದರು. ಈ ವಿಷಯವನ್ನು ಪ್ರಧಾನಿ ರಾಜೀವ್ ಗಾಂಧಿಯವರೇ ಹೇಳಿದ್ದಾರೆ. ಮಹಾಜನ್ ವರದಿಯೇ ಫೈನಲ್ ಎಂದು ಅವರು ಹೇಳಿರಬೇಕಾದರೆ ಬೆಳಗಾಮ್‌ನ್ನು ಬಿಟ್ಟುಕೊಡುವ ಮಾತೇ ಇಲ್ಲ ಮಹಾರಾಷ್ಟ್ರದ ನಾಯಕರುಗಳು ಬೇರೆ ಬೇರೆ ಒತ್ತಡವನ್ನು ಕೇಂದ್ರದ ಮೇಲೆ ತರುತ್ತಿದ್ದಾರೆ, ಇಡೀ ದೇಶದಲ್ಲಿ ಬೆಳಗಾಮ್ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಹೇಳಿ ಮಹಾರಾಷ್ಟ್ರದ ಬೇಡಿಕೆ ನ್ಯಾಯವಾಗಿದೆ ಎಂಬ ರೀತಿಯಲ್ಲಿ ಜನರು ತಿಳಿದುಕೊಳ್ಳುವ ಹಾಗೆ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಯವರು ಮತ್ತು ಶರದ್ ಪವಾರ್‌ರವರು ಮಹಾರಾಷ್ಟ್ರಕ್ಕೆ ಬೆಳಗಾಮ್ ಬರಬೇಕು ಎನ್ನುವ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಅವರು ಏನು ತಪ್ಪು ಅಭಿಪ್ರಾಯಗಳನ್ನು ಹೇಳಿದ್ದಾರೋ ಅವುಗಳನ್ನು ಉದ್ದರಿಸಿ ನಾನು ಇಲ್ಲಿ ಹೇಳಿದ್ದೇನೆ. ತಾವು ಈ ವಿಚಾರದಲ್ಲಿ ಸರಿಯಾದಂಥ ಒಂದು ನಿರ್ಣಯವನ್ನು ಮಾಡಿ ಈಗ ಉಂಟಾಗಿರುವ ವಾತಾವರಣವನ್ನು ತಿಳಿಗೊಳಿಸಬೇಕು. ಬೆಳಗಾಮಂ ಕರ್ನಾಟಕದ ಅವಿಭಾಜ್ಯ ಅಂಗ. ತಾವು ಇದರ ಬಗ್ಗೆ ಸ್ವಲ್ಪ ವಿಚಾರಿಸಿಕೊಂಡು ಮಹಾರಾಷ್ಟ್ರದವರು ಪದೇ ಪದೇ ಗಡಿ ಬಗ್ಗೆ ಮಾತನಾಡುವುದಕ್ಕೆ ತೆರೆ ಎಳೆಯಬೇಕು. ಮಹಾರಾಷ್ಟ್ರದ ಮುಖಂಡರುಗಳಿಗೂ ನೋವು ಆಗಬಾರದೆಂಬ ಭಾವನೆಯಿಂದ ನಾವು ಮಾತನಾಡಿದ್ದೇವೆ ಎಂಬ ಅಭಿಪ್ರಾಯ ಅನೇಕ ಪತ್ರಿಕೆಗಳಲ್ಲಿ ಬಂದಿದುದರಿಂದ ನಾವು ಈ ರೀತಿ ಹೇಳಬೇಕಾಯಿತು. ಈಗ ತಾವು ತಮ್ಮ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೀರಿ. ಈಗ ಈ ಒಂದು ವಾತಾವರಣ ತಿಳಿಯಾಗಿದೆ ಎಂಬುದರ ಬಗ್ಗೆ ನನಗೆ ಏನೂ ಅನುಮಾನ ಇಲ್ಲ. ಇನ್ನು ಮುಂದೆ ಪ್ರಧಾನ ಮಂತ್ರಿಗಳಿಗೆ ತಾವು ಈ ಕುರಿತು ಯಾವಾಗ ಭೇಟಿಯಾಗುತ್ತೀರಿ ? ಅಥವಾ ಕೇಂದ್ರದ ಮಂತ್ರಿಗಳೊಂದಿಗೆ ಆಗಲೀ, ಅಥವಾ ತಮ್ಮ ಪಕ್ಷದ ಮುಖಂಡರುಗಳೊಂದಿಗಾಗಲೀ, ತಾವು ಯಾವಾಗ ಭೇಟಿ ಆದಾಗ ಕರ್ನಾಟಕ ರಾಜ್ಯದ ಬಗ್ಗೆ, ಅದರ ಹಿತಾಸಕ್ತಿಗಳ ಬಗ್ಗೆ, ತಿಳಿಯಾದಂಥ, ಸ್ಪಷ್ಟವಾದಂಥ ವಾತಾವರಣವನ್ನು ನಾವು ಈ ದೇಶದಲ್ಲಿ ಮೂಡಿಸುವುದೂ ಒಳ್ಳೆಯದು ಎಂದು ನಾನು ಇಷ್ಟನ್ನು ಹೇಳುತ್ತಾ, ನಾವು ಈಪೊತ್ತು ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕಾರ ಮಾಡುತ್ತಾ ಇದ್ದೇವೆ, ಈ ನಿರ್ಣಯದ ಆಧಾರದ ಮೇಲೆ ೧೭ ವರ್ಷಗಳ ಮೊದಲೇ, ಈ ಒಂದು ನಿರ್ಣಯವನ್ನು ಮಾಡಬೇಕಾದಂಥ ಅವಕಾಶವನ್ನು ಮಹಾರಾಷ್ಟ್ರದ ಮುಖಂಡರುಗಳು ಇವೊತ್ತು ಕಲ್ಪಿಸಿದ್ದಾರೆ, ಅದರೂ ಕೂಡ ಬರೀ ತಮ್ಮ ರಾಜ್ಯದ ಒಂದು ಸೀಮಿತ ಹಿತಾಸಕ್ತಿಯನ್ನು ಅಥವಾ ಭಾಷೆಯ ಒಂದು ಸೀಮಿತವಾದ ತಾಸಕ್ತಿಯನ್ನು ಮಾತ್ರ ನೋಡದೆ, ಇಡೀ ರಾಷ್ಟ್ರದ ಹಿತಾಸಕ್ತಿಯನ್ನು ನೋಡಿ ಮಹಾಜನ್ ಆಯೋಗದಪರು ಯಾವ ಒಂದು ನಿರ್ಣಯವನ್ನು ಕೊಟ್ಟಿದ್ದಾರೆ, ಅದನ್ನು ರಾಷ್ಟ್ರದ ಒಂದು ಸಮಗ್ರತೆಯ ದೃಷ್ಟಿಯಲ್ಲಿ. ಪ್ರಾಮಾಣಿಕವಾದಂತಹ ಒಂದು ಸೂಕ್ತ ಮಾರ್ಗದಲ್ಲಿ, ಆಯೋಗದ ವರದಿಯ ಅನುಷ್ಠಾನವನ್ನು ಮಾಡಲಿಕ್ಕೆ ಒಪ್ಪಿಕೊಳ್ಳಬೇಕು ಎಂದು ಒಂದು ಕೊನೆಯ ಪ್ರಾರ್ಥನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಗಮನಕ್ಕೆ ತರಂತ್ಕೇನೆ. ಮಹಾರಾಷ್ಟ್ರ ಮತ್ತು ನಮ್ಮ ಕರ್ನಾಟಕದ ಗಡಿ ವಿವಾದ ಏಕಮುಖ ಆಗಬಾರದು, ತಾವುಗಳು ಮಹಾರಾಷ್ಟ್ರದವರ ಜೊತೆಯಲ್ಲಿ ಮಾತನಾಡಬೇಕಾದರೆ, ಕೇಂದ್ರಕ್ಕೆ ಸ್ಪಷ್ಟವಾದ ಒಂದು ಪರಶ್ನೆಯನ್ನು ಹಾಕಬೇಕು. ಈ ಕುರಿತು ಮಹಾರಾಷ್ಟ್ರದ ಮುಖ್ಯಮಂತ್ರಿಯವರನ್ನು ಕರೆದಾಗ ಕೇರಳ

ರಾಜ್ಯದ ಮುಖ್ಯ ಮಂತ್ರಿಯವರನ್ನೂ ಕೂಡ ಕರೆದು, ಇದರ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸ ಬೇಕೆ ಹೊರತು ಒಂದು ಇನ್‌ಸ್ಟಾಲ್‌ಮೆಂಟ್ ಆಥವಾ ಮಹಾರಾಷ್ಟ್ರದ ಗಡಿ ವಿಚಾರದಲ್ಲಿ ಮಾತ್ರ ಚರ್ಚೆ ಮಾಡುವುದಲ್ಲ, ಕೇರಳದ ವಿಚಾರದಲ್ಲಿ ಕೂಡಾ ಚರ್ಚೆ ಮಾಡಬೇಕು. ಗಡಿವಿಚಾರದ ಕುರಿತು ಚರ್ಚೆ ಮಾಡಬೇಕಾದಂಥ ಕಾಲದಲ್ಲಿ, ಆ ಒಂದು ಹಂತದಲ್ಲಿ ಮೂರು ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಕರೆದು ಚರ್ಚೆ ನಡೆಸಿದರೆ ಮಾತ್ರ ನಾನು ಆ ಚರ್ಚೆಯಲ್ಲಿ ಬರುವುದಕ್ಕೆ ಸಾಧ್ಯ ಎಂಬ ಒಂದು ಷರತ್ತನ್ನು ಹಾಕಬೇಕು. ನಾವು ಮಹಾಜನ್ ವರದಿಯ ಅನುಷ್ಠಾನವನ್ನು ಮಾಡಬೇಕೆಂದು ನಿರ್ಣಯ ಮಾಡುತ್ತಾ ಇದ್ದೇವೆ. ಇವೊತ್ತು ಇದನ್ನು ಪುನರ್ ವಿಚಾರ ಮಾಡದೆಯೇ ಈ ನಿರ್ಣಯದ ಆಧಾರದ ಮೇಲೆ ನಮ್ಮ ಒಂದು ಭಾಷೆಯ ವಿಚಾರದಲ್ಲಿ ಯಾವುದೇ ರೀತಿಯಾದಂಥ ಉದ್ವೇಕಕ್ಕೆ ಒಳಗಾಗದೆ, ಸೌಹಾರ್ದ ರೀತಿಯಲ್ಲಿ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡಿಕೊಂಡು ಈ ಒಂದು ಸಮಸ್ಯೆಯ ಪರಿಹಾರ ಆಗಬೇಕೆಂದು ಹೇಳ ಬಯಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಈ ಗಡಿ ವಿಚಾರದಲ್ಲಿ ನಮ್ಮ ಈ ಸಭೆಯ ನಾಯಕರು ಮತ್ತು ಮುಖ್ಯಮಂತ್ರಿಯವರು ತಂದಿರುವಂಥ ಈ ತೀರಾವನ್ನು ಸಂಪೂರ್ಣವಾಗಿ ನಾನು ಬೆಂಬಲಿಸುತ್ತಾ ಈ ಕುರಿತು ಒಂದೆರಡು ಮಾತುಗಳನ್ನಾಡಬಯಸುತ್ತೇನೆ.

ಕನ್ನಡಿಗರು ಶಾಂತಿ ಪ್ರಿಯರು, ಏಷ್ಟೇ ಸಹನಾಶೀಲರು ಮತ್ತು ನ್ಯಾಯಪ್ರಿಯರು, ಅಥವಾ ಗಾಂಧಿ ತತ್ವಗಳ ಅನುಯಾಯಿಗಳು. ಆದುದರಿಂದಲೇ ಮಹಾತ್ಮಗಾಂಧೀಜಿಯವರು ಬೆಳಗಾವಿಯಲ್ಲಿ ಆದಂಥ ಕಾಂಗ್ರೆಸ್ ಅಧಿವೇಶನಕ್ಕೆ ಪ್ರಥಮ ಮತ್ತು ಕೊನೆಯದಾಗಿ ಅಧ್ಯಕ್ಷರಾದರು. ಅಂದಿನಿಂದ ಈ ತನಕವೂ ಕಾಂಗ್ರೆಸ್ ಅವಿಭಾಜ್ಯವಾಗಿದ್ದಾಗ ಆಗಲಿ, ಅಥವಾ ಯಾವತ್ತೇ ಆಗಲೀ, ಬೆಳಗಾವಿ ಯಾವಾಗಲೂ ಕರ್ನಾಟಕದ ಅವಿಭಾಜ್ಯ ನಗರ ಎಂದು ಹೇಳಿ ಇತಿಹಾಸದಲ್ಲಿ ಸ್ಪಷ್ಟವಾದ ಉಲ್ಲೇಖ ಇದೆ. ಇದು ಮಹಾರಾಷ್ಟ್ರವಾದಿಗಳಿಗೂ ಕೂಡ ಗೊತ್ತಿರುವ ವಿಚಾರವಾಗಿದೆ. ಆದರೆ ಈ ಮಹಾರಾಷ್ಟ್ರವಾದಿಗಳಲ್ಲಿ ಒಂದು ಉದ್ದೇಶ ಏನಿದೆಯೆಂದರೆ, ಕರ್ನಾಟಕವನ್ನು ಏನಾದರೂ ಮಾಡಿ, ಎರಡೂ ಭಾಗಗಳನ್ನಾಗಿ ವಿಂಗಡಿಸಿದರೆ ತಮಗೆ ಬೆಂಬಲ ಸಿಗುತ್ತದೆಯೋ ಏನೋ ಎಂಬ ಆಸೆ ಇದ್ದಿರ ಬಹುದು.

ನಮ್ಮ ಮುಖ್ಯಮಂತ್ರಿಯವರು ಜನತೆಯ ಭಾವನೆಯ ನಿಜವಾದ ಚಿತ್ರಣವನ್ನು ಇವೊತ್ತು ಬೆಂಬಲಿಸಿದ್ದಾರೆ. ಅವರಿಗೆ ಈ ಕುರಿತು ನಾವು ನಮ್ಮ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ಮಹಾರಾಷ್ಟ್ರವಾದಿಗಳು ಇವರು ಸೌಜನ್ಯಪೂರ್ವಕವಾಗಿ ಹೇಳಿದ ಗಡಿಗಳನ್ನು ಸ್ಪಷ್ಟವಾಗಿ ತಿಳಿದು ಕೊಂಡು, ಸಭ್ಯಗೃಹಸ್ಥರ ರೀತಿಯಲ್ಲಿ, ಈ ಸಮಸ್ಯೆಯನ್ನು ನಿವಾರಣೆ ಮಾಡಿಕೊಳ್ಳಬೇಕು ಎಂದು ಕೊನೆಯದಾಗಿ ನಾವು ಹೇಳಬೇಕು. ಇಲ್ಲದಿದ್ದರೆ ಕರ್ನಾಟಕ ರಾಜ್ಯದ ಯಾವುದೇ ಒಂದು ಭಾಗವನ್ನು ಅವರು ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದರೆ, ನಿಜವಾಗಿಯೂ ರಕ್ತ ಕ್ರಾಂತಿಯಾದರೂ ಕರ್ನಾಟಕದ ಜನತೆ ರಾಜ್ಯದ ಒಂದು ಅಂಗುಲವನ್ನು ಕೂಡ ಬಿಟ್ಟುಕೊಡಲಿಕ್ಕೆ ಸಿದ್ಧರಿಲ್ಲ ಎಂದು ಈ ಸದನದಲ್ಲಿ ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರದಲ್ಲಿ ನಮ್ಮ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈ ಒಂದು ನಿರ್ಣಯವನ್ನು ಪ್ರಾಂಡಿಸುತ್ತಾ, ಒಬ್ಬ ಕನ್ನಡಿಗನಾಗಿ, ಭಾವನಪೂರ್ವಕವಾಗಿ ಈ ಕನ್ನಡ ರಾಜ್ಯದ ಬಗ್ಗೆ ಮಾತನಾಡಿದ್ದಾರೆ. ಅವರ ಭಾಷೆ ಬಹಳ ಸುಲಲಿತವಾಗಿತ್ತು. ನಾನು ಹಿಂದೆಂದೂ ಈ ರೀತಿಯ ಸುಲಲಿತವಾದಂಥ ಭಾಷೆಯನ್ನು ಅವರಿಂದ ಕೇಳಿರಲಿಲ್ಲ. ಅವರು ಈ ಕನ್ನಡ ರಾಜ್ಯದ ಹಿನ್ನೆಲೆಯಲ್ಲಿ ಅಷ್ಟು ಚೆನ್ನಾಗಿ ಮಾತನಾಡಿದ್ದಾರೆ. ಕನ್ನಡ ರಾಜ್ಯದ ಹಿತವನ್ನು ರಕ್ಷಣೆ ಮಾಡುವ ವಿಚಾರದಲ್ಲಿ ಅವರು ಮಾಡಿದ ಭಾಷಣವು ಕೇಳುವಾಗ ನನ್ನ ಕಿವಿಗಂತೂ ಬಹಳ ಇಂಪಾಗಿತ್ತು.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಬಹಳ ದಿನಗಳಿಂದ ನಡೆಯುತ್ತಿದೆ. ನಾನು ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗುತ್ತದೆ. ನಾನು ಕರ್ನಾಟಕ ಏಕೀಕರಣ ಸಮಿತಿಯಲ್ಲಿ ಕಾರ್ಯದರ್ಶಿಯಾಗಿದ್ದೆ. ಮಾನ್ಯ ನಿಜಲಿಂಗಪ್ಪನವರು ಅದರ ಅಧ್ಯಕ್ಷರಾಗಿದ್ದರು. ೧೯೫೨ನೇ ಇಸವಿಯಿಂದ ನಾವು ಕೆಲಸ ಮಾಡಿದ್ದೇವೆ. ಗಡಿ ಪ್ರದೇಶದಲ್ಲಿರತಕ್ಕಂತಹ ಊರುಗಳಾಗಲೀ, ಪಟ್ಟಣಗಳಾಗಲೀ, ಎಲ್ಲದರ ಪರಿಚಯ ನನಗೆ ಉಂಟು. ಆಪತ್ತು ಕನ್ನಡ ರಾಜ್ಯ ಏನಾ ಹರಿದು ಹಂಚಿ ಹೋಗಿತ್ತು.

ಅದು ಒಂದು ರಾಜ್ಯವಾಗಿ ಇವತ್ತು ನಮ್ಮ ಕೈಯ್ಯಲ್ಲಿ ಇದೆ. ೧೯೫೬ನೇ ಇಸವಿಯಲ್ಲಿ ಫಜಲ್‌ಆಲಿ ಯವರು ಇಲ್ಲಿಗೆ ಬಂದರು ಅದರ ಹಿನ್ನೆಲೆ ಏನು ಇತ್ತು ಎಂದರೆ ಕನ್ನಡ ಮಾತನಾಡತಕ್ಕ ಜನಗಳು ಒಂದು ಕಡೆ ಸೇರಬೇಕು ಅದನ್ನು ಒಂದು ರಾಜ್ಯವನ್ನಾಗಿ ಮಾಡಬೇಕು ಎಂದು ಇತ್ತು. ಕನ್ನಡ ಜನರ ಏಳಿಗೆಗೋಸ್ಕರ ದುಡಿಯಬೇಕೆಂಬ ಆಸೆ ಆಕಾಂಕ್ಷೆ ನನ್ನದೂ ಇತ್ತು ಅದೂ ಆಯಿತು. ಗಡಿ ವಿಂಗಡಣೆ ಆಯಿತು, ಮತ್ತೆ ರಾಜ್ಯ ಪುನರ್ ವಿಂಗಡಣೆಯಾಯಿತು. ಪುನರ್ ವಿಂಗಡಣೆಯಾದ ಮೇಲೆ ಅದರ ಪ್ರಕಾರ ಕನ್ನಡ ರಾಜ್ಯಕ್ಕೆ ಬಹಳ ಅನ್ಯಾಯವಾಯಿತು ಅನ್ಯಾಯವಾಯಿತೆಂದರೆ ಮದ್ರಾಸ್ ರಾಜ್ಯದಲ್ಲಿ ಕೆಲವು ಪ್ರದೇಶ ಬಿಟ್ಟು ಹೋಗಿವೆ ಕೇರಳದಲ್ಲಿ ಕೆಲವು ಪ್ರದೇಶ ಬಿಟ್ಟು ಹೋಗಿವೆ ಮಹಾರಾಷ್ಟ್ರದಲ್ಲಿ ಕೆಲವು ಪ್ರದೇಶಗಳು ಬಿಟ್ಟು ಹೋಗಿವೆ, ಆಂಧ್ರ ಪ್ರದೇಶದಲ್ಲಿ ಕೆಲವು ಪ್ರದೇಶಗಳು ಬಿಟ್ಟು ಹೋಗಿವೆ ಒಟ್ಟಿನಲ್ಲಿ ಹೇಳುವುದಾದರೆ ನಮಗೆ ಅನ್ಯಾಯವಾಯಿತು. ಆದರೆ ನಮಗೆ ಅನ್ಯಾಯವಾಯಿತೆಂದು ಬೀದಿಗೆ ಇಳಿದು ನಾವೇನೂ ಪ್ರದರ್ಶನ ಮಾಡಲಿಲ್ಲ. ಅದಕ್ಕೆ ಕಾರಣವೇನೆಂದರೆ ನಾವು ಶಾಂತಿ ಪ್ರಿಯರು ಎಂದು ಮಾನ್ಯ ಪಾಟೀಲ್‌ರವರು ಈಗಾಗಲೇ ಹೇಳಿದ್ದಾರೆ. ಈ ರಾಷ್ಟ್ರದಲ್ಲಿ ಒಗ್ಗಟ್ಟು ಇರಬೇಕು ಎಲ್ಲಾ ಪ್ರದೇಶಗಳು ಕೂಡ ಇಂಡಿಯಾ ದೇಶ, ಹಿಂದೂಸ್ಥಾನಕ್ಕೆ ಸೇರಿದಂತಹ ಪ್ರದೇಶಗಳೇ ಆಗಿವೆ. ನಾವು ದೇಶದ ಸಮಗ್ರತೆಯ ಬಗ್ಗೆ ಒಗ್ಗಟ್ಟಿನ ಬಗ್ಗೆ ಇಷ್ಟು ಉದ್ದುದ್ದ ವಾದ, ಎತ್ತರವಾಗಿರುವಂತಹ ಧ್ವನಿಯಲ್ಲಿ ಮಾತನಾಡುತ್ತಿರುವಾಗ ಈ ಪಟ್ಟಣ ನಮಗೆ ಬರಬೇಕು ಆ ಹಳ್ಳಿ ನಮ್ಮ ರಾಜ್ಯಕ್ಕೆ ಸೇರಬೇಕು, ಮತ್ತೊಂದು ಹಳ್ಳಿ ಬೇರೆ ರಾಜ್ಯಕ್ಕೆ ಹೋಗಬೇಕೆಂದು ಹೇಳತಕ್ಕಂತಹ ಈ ಸಂಕುಚಿತ ಭಾವನೆ ಏನು ಇದೆ ಅದು ಈಗಿನ ಸನ್ನಿವೇಶದಲ್ಲಿ ನನಗಂತೂ ಸರಿಯಲ್ಲವೆಂದು ಅನಿಸುತ್ತದೆ. ನಾನು ತಮಿಳು ನಾಡಿಗೆ ಹೋಗಿದ್ದೆ. ಅಲ್ಲಿ ತಮಿಳಿನಲ್ಲೇ ಮಾತನಾಡುತ್ತಾರೆ ಬರವಣಿಗೆ ಬೋರ್ಡ್ಸ್‌ಗಳೆಲ್ಲಾ ತಮಿಳಿನಲ್ಲೇ ಇದೆ. ನಾನು ಕೇರಳಕ್ಕೆ ಹೋಗಿದ್ದೆ ಅಲ್ಲಿ ನೋಡಿದರೆ ಎಲ್ಲವೂ ಕೂಡ ಮಲೆಯಾಳದಲ್ಲಿ ಇದೆ, ಇಂಗ್ಲೀಷ್ ಪತ್ರಿಕೆಗಳು ಇವೆ ಅವನ್ನು ಬಿಟ್ಟು ಬಿಡಿ, ಉಳಿದ ಎಲ್ಲಾ ವ್ಯವಹಾರಗಳನ್ನು ಮಲೆಯಾಳದಲ್ಲೇ ಮಾಡುತ್ತಾರೆ. ಇನ್ನು ಮಹಾರಾಷ್ಟ್ರದಲ್ಲಿ ಎಲ್ಲರೂ ಮರಾಠಿಯಲ್ಲಿ ಮಾತನಾಡತಕ್ಕಂತಹವರೇ ಇದ್ದಾರೆ ಬೇರೆ ಭಾಷೆಯಲ್ಲಿ ಮಾತನಾಡುವುದಕ್ಕೆ

ಅಲ್ಲಿ ಅವಕಾಶವನ್ನೇ ಕೊಡುವುದಿಲ್ಲ. ಇವತ್ತು ಕನ್ನಡಿಗರೂ ಕೂಡ ಇದೇ ರೀತಿಯ ಭಾವನೆಯನ್ನು ಬೆಳೆಸಿಕೊಂಡು ಬರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಸರಿಯೇ ಎಂದು ಪ್ರಶ್ನೆ ಹಾಕಿದರೆ, ಇದು ಸರಿಯಲ್ಲವೆಂದು ನನ್ನ ಭಾವನೆ. ನಾವೆಲ್ಲರೂ ಒಂದು ದೇಶದಲ್ಲಿರತಕ್ಕಂತಹ ಜನ ಕೆಲವು ಭಾಗ ಆ ಕಡೆ ಹೋಗಿದೆ ಇನ್ನು ಕೆಲವು ಭಾಗ ಈ ಕಡೆ ಹೋಗಿದೆ ಎಂದು ವ್ಯಾಜ್ಯ ಮಾಡತಕ್ಕಂಥಾದ್ದು ಸಂಕುಚಿತ ಭಾವನೆ. ಸಣ್ಣತನವೆಂದು ನನಗಾದರೂ ಅನಿಸುತ್ತದೆ. ಮತ್ತು ಎಲ್ಲರಿಗೂ ಆ ರೀತಿ ಅನ್ನಿಸಿರಲೇಬೇಕು. ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಬೆಳಗಾಂ ಪ್ರದೇಶ ಏನು ಇದೆ ಅದು ನಮಗೆ ಬರಬೇಕು ನೂರು ಕೋಟಿ ರೂಪಾಯಿಯನ್ನಾದರೂ ಕೊಡಲಿಕ್ಕೆ ನಾವು ಸಿದ್ಧವಾಗಿದ್ದೇವೆ. ಅನ್ನತಕ್ಕಂತಹ ಏನು ಹೇಳಿಕೆ ಇದೆ ಅದು ಹಾಸ್ಯಾಸ್ಪದವಾಗಿದೆ. ಇಡೀ ಹಿಂದೂಸ್ಥಾನದಲ್ಲಿರತಕ್ಕಂತಹ ಜನರಲ್ಲಿ ಒಬ್ಬರಿಗೊಬ್ಬರು ಕಚ್ಚಾಡತಕ್ಕಂತಹ ಭಾವನೆ ಇರಬಾರದು ಎಂದು ನಾನಾದರೂ ಕೂಡ ಸ್ಥಿರವಾಗಿ ನಂಬಿದ್ದೇನೆ. ಮಹಾರಾಷ್ಟ್ರದವರಿಗೆ ಈಗಲಾದರೂ ಬುದ್ಧಿ ಬರಬೇಕು ಅಲ್ಲಿರತಕ್ಕಂತಹ ಜನರು ಕರ್ನಾಟಕ ರಾಜ್ಯಕ್ಕೆ ಬಂದು ಈ ಜನರನ್ನು ಪ್ರಚೋದನೆ ಮಾಡಿ ಇಲ್ಲಿ ಕಚ್ಚಾಟದ ಭಾವನೆಯನ್ನು ಮೂಡಿಸಂಪತಂಹ ಪ್ರಯತ್ನ ಮಾಡತಕ್ಕಂಥಾದ್ದು ಸರಿಯಲ್ಲ. ಮಾನ್ಯ ಹೆಗಡೆಯವರು ಬಹಳ ಸುಲಲಿತವಾಗಿರತಕ್ಕಂತಹ ಕನ್ನಡ ಭಾಷೆಯಲ್ಲಿ ಮಾತನಾಡಿ ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಯಾವ ರೀತಿಯಾಗಿ ವರ್ತನೆ ಮಾಡಬೇಕು ನಮ್ಮಲ್ಲಿ ಮರಾಠಿ ಮಾತನಾಡತಕ್ಕಂತಹ ಜನರಿಗೆ ಯಾವ ರೀತಿಯ ಅನುಕೂಲಗಳನ್ನು ಮಾಡಿಕೊಡುತ್ತೇವೆ ಅನ್ನತಕ್ಕಂಥಾದ್ದನ್ನು ವಿವರವಾಗಿ ಹೇಳಿದ್ದಾರೆ. ಮಹಾರಾಷ್ಟ್ರದವರೂ ಕೂಡ ಅದೇ ರೀತಿ ಅಲ್ಲಿ ಮಾಡಬೇಕು. ಕನ್ನಡ ಮಾತನಾಡಲಿ ಮರಾಠಿ ಮಾತನಾಡಲಿ ಅವರು ಯಾವ ರಾಜ್ಯದಲ್ಲೇ ಇರಲಿ ಅವರೆಲ್ಲರೂ ಕೂಡ ಹಿಂದೂಸ್ಥಾನದಲ್ಲಿರತಕ್ಕಂತಹವರು ಎಂಬ ಭಾವನೆ ಎಲ್ಲಿಯವರೆಗೆ ನಮ್ಮಲ್ಲಿ ಇರುವುದಿಲ್ಲವೋ ಅಲ್ಲಿಯವರೆಗೆ ನಮ್ಮಲ್ಲಿ ಸಂಕುಚಿತ ಭಾವನೆ ಹಾಗೇ ಉಳಿಯುತ್ತದೆ. ಆದ್ದರಿಂದ ಇವತ್ತು ಶ್ರೀಮಾನ್ ರಾಜೀವ್‌ಗಾಂಧಿಯವರು ಪದೇ ಪದೇ ದಿವಸಂಪ್ರತಿ ಏನು ಹೇಳುತ್ತಿದ್ದಾರೆ, integrity of the nation, unity of the nation.....ಎಂದು ಏನು ಹೇಳುತ್ತಿದ್ದಾರೆ, ಇದನ್ನು ಕಾಪಾಡುವುದಕ್ಕೋಸ್ಕರ ನಾವು ಹೋರಾಡಬೇಕು ಈ ಭಿದ್ರ ಭಿದ್ರ ಭಾವನೆಗಳನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿದ್ದು ಯಾವ ರೀತಿಯಲ್ಲಿ ಇದನ್ನು ಕಾಪಾಡಿಕೊಳ್ಳುವುದು ? ಹೊರದೇಶಗಳು

ನಮ್ಮ ದೇಶದ ಮೇಲೆ ಆಕ್ರಮಣ ಮಾಡಬೇಕು ಎಂದು ಪ್ರಯತ್ನ ಮಾಡುತ್ತಿರುವಾಗ ಎಲ್ಲರೂ ಒಗ್ಗಟ್ಟಾಗಿ ಇದನ್ನು ಯಾವ ರೀತಿ ಸಾಧನೆ ಮಾಡಬೇಕೆಂದು ಯೋಚಿಸಬೇಕಾಗಿದೆ. ಆದ್ದರಿಂದ ನಾನು ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ನಿರ್ಣಯವನ್ನು ತಂದು ಇಟ್ಟಿದ್ದಾರೆ. ಇದನ್ನು ಬಹಳ ಸ್ವಾಗತಾರ್ಹವಾಗಿರತಕ್ಕಂಥದ್ದು. ಎಲ್ಲಾ ಸದಸ್ಯರು ಇದನ್ನು ಒಕ್ಕೊರಲಿನಿಂದ ಈ ನಿರ್ಣಯಕ್ಕೆ ಬೆಂಬಲವನ್ನು ಕೊಡಬೇಕು. ಇದರಲ್ಲಿ ಪಾರ್ಟಿ ಭಿನ್ನತೆ ಇಲ್ಲ, ಆದ್ದರಿಂದ ಎಲ್ಲಾ ಸದಸ್ಯರುಗಳು ಇದನ್ನು ಒಕ್ಕೊರಲಿನಿಂದ ಈ ನಿರ್ಣಯವನ್ನು ಬೆಂಬಲಿಸಬೇಕು ಎಂದು ಬೇಡಿಕೊಳ್ಳುತ್ತೇನೆ. ಎಲ್ಲರನ್ನೂ ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಇನ್ನೊಂದು ವಿಚಾರವನ್ನು ತಮಗೆ ಹೇಳಬೇಕು. ಈಗ ಭಾಷಾವಾರು ಪ್ರಾಂತ್ಯ ಸರಿಯೋ ತಪ್ಪೋ ಎಂಬ ಭಾವನೆ ನನ್ನಲ್ಲಿ ಇದೆ. ಛಿದ್ರವಾಗಿರತಕ್ಕಂಥ ಭಾವನೆಗಳು, ಮನಸ್ಸು ಇಂಥ ಕಲಹಗಳು ನೋಡಿ ಪುನಃ ಸ್ಟೇಟ್ ರೀ-ಆರ್ಗನೈಜೇಷನ್ ಮಾಡಬೇಕು. ರಾಜ್ಯಗಳ ಪುನರ್ ವಿಂಗಡಣೆ ಮಾಡಬೇಕು, ಇದನ್ನು ಭಾಷೆಗಳ ಮೇಲೆ ಮಾಡಬಾರದು. ಯುನೈಟೆಡ್ ಸ್ಟೇಟ್‌ನಲ್ಲಿ ಯಾವರೀತಿ ಮಾಡಿದ್ದಾರೆ, ಆ ರೀತಿ ವಿಂಗಡಣೆಯನ್ನು ಆ ಪ್ರಕಾರವಾಗಿ ಏತಕ್ಕೆ ಮಾಡಬಾರದು ಎನ್ನತಕ್ಕಂಥ ಭಾವನೆ ನಮ್ಮಲ್ಲಿ ಬರುತ್ತದೆ. ಆ ಭಾವನೆ ಎಡೆಗೊಡಬಾರದು. ಇಲ್ಲಿ ಕನ್ನಡಿಗರಾಗಲೀ, ಮರಾಠಿಯವಾಗಲೀ, ಕೇರಳವಾಗಲಿ, ತಮಿಳುನಾಡಾಗಲೀ ಯಾರೇ ಆಗಲಿ ಇಲ್ಲಿ ಎಲ್ಲರೂ ಅಣ್ಣತಮ್ಮಂದಿರಂತೆ ಒಟ್ಟಾಗಿ ಹೊಂದಾಣಿಕೆ ಮಾಡಿಕೊಂಡು ಈ ದೇಶದ ಅಭಿವೃದ್ಧಿಗೆ ನಾವೆಲ್ಲಾ ದುಡಿಯಬೇಕು. ಅಂತಹ ಭಾವನೆ ನಮ್ಮಲ್ಲಿ ಬರುತ್ತದೆ ಎಂದು ಹೇಳುತ್ತಿದ್ದೇನೆ. ಇನ್ನೊಂದು ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡಲಿಕ್ಕೆ ಬಯಸುತ್ತೇನೆ. ಈ ಮಹಾರಾಷ್ಟ್ರ ರಾಜ್ಯದ ಬಗ್ಗೆ ಶ್ರೀಮಾನ್ ರಾಜೀವ್‌ಗಾಂಧಿಯವರಿಗೆ ಭೇಟಿ ಮಾಡಲಿಕ್ಕೆ ಪದೇ ಪದೇ ಈ ಸದನದಿಂದ ಹೋಗುತ್ತಿದ್ದಾರೆ. ಅಸೆಂಬ್ಲಿ ಮತ್ತು ಕೌನ್ಸಿಲ್‌ನಿಂದ ಹೋಗುತ್ತಿದ್ದಾರೆ ನಾವು ಹೋಗಬೇಕೇ ಬೇಡವೇ ಎನ್ನತಕ್ಕಂಥ ಮಾತು ಆದು ಬೇರೆ. ನಮ್ಮ ಸಲಹೆ ಏನು ಎಂದು ಹೇಳಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಲೆಜಿಸ್ಲೇಚರ್ ಇದೆ. ಅದರ ಪರವಾಗಿ ಶ್ರೀಮಾನ್ ರಾಜೀವ್ ಗಾಂಧಿಯವರಿಗೆ ಅವರಿಗೆ ಒಂದು ಒತ್ತಾಯದ ರೂಪದಲ್ಲಿ ತರುವುದು ಆಗಿರಲಿ, ಅವನ್ನು ಅವರಿಗೆ ಕೇಳುವ ರೂಪದಲ್ಲಿ ಆಗಿರಲಿ, ಕರ್ನಾಟಕ ರಾಜ್ಯದ ಜನತೆಯ ಆಸೆ ಆಕಾಂಕ್ಷೆಗಳನ್ನು ಅವರ ಮುಂದೆ ನಾವು ಇಟ್ಟುಬಿಟ್ಟು ಅತೀ ಶೀಘ್ರವಾಗಿ ಈ ಒಂದು ಕಾನೂನನ್ನು ತಂದು ಈ ವಿವಾದವನ್ನು ಕೊನೆ ಮಾಡಲಿಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡುತ್ತಿದ್ದೇನೆ. ಇದರ ಬಗ್ಗೆ ಅವರೆಲ್ಲರೂ ಒಪ್ಪಿದರೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ನಿರ್ಣಯವನ್ನು ಬೆಂಬಲಿಸುತ್ತಾ ಈ ಒಂದು ಬೆಳಗಾಂ ವಿಚಾರದಲ್ಲಿ ಪತ್ರಿಕೆಗಳಲ್ಲಿ ಬಂದಂಥ ವಿಷಯದ ಬಗ್ಗೆ ವಿರೋಧಪಕ್ಷದ ನಾಯಕರು ಹಲವಾರು ವಿಷಯಗಳನ್ನು ವ್ಯಕ್ತ ಪಡಿಸಿದ್ದರೋ ಅದಕ್ಕೆ ಸಮಂಜಸವಾದಂಥ ಉತ್ತರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಈ ಒಂದು ಮಹಾಜನ್ ವರದಿ ಬಂದು ಸುಮಾರು ೨೦ ವರ್ಷಗಳಾದರೂ ಕೂಡಾ ಅದನ್ನು ಕಾರ್ಯಗತ ಗೊಳಿಸುವುದಕ್ಕೆ ಕೇಂದ್ರ ಸರ್ಕಾರ ತಾಳಿರತಕ್ಕಂಥ ಈ ನಿಧಾನ ಪ್ರವೃತ್ತಿ ಇದಕ್ಕೆಲ್ಲಾ ಕಾರಣ ಕೇಂದ್ರ ಸರ್ಕಾರ ಈ ಒಂದು ಮಹಾಜನ್ ಸಮಿತಿಯನ್ನು ನೇಮಕ ಮಾಡಿದ್ದುದು. ಅವರು ಕೊಟ್ಟಂಥ ವರದಿಯನ್ನು ಚಾಚೂ ತಪ್ಪದಂತೆ ಕಾರ್ಯರೂಪಕ್ಕೆ ತರುತ್ತಾರೆ ಎನ್ನತಕ್ಕಂಥ ಒಂದು ಭರವಸೆಯ ಆಧಾರದ ಮೇಲೆ ಇವತ್ತು ಆ ಸಮಿತಿಯನ್ನು ನೇಮಕ ಮಾಡಿದ್ದು.ಆ ಸಮಿತಿಯ ವರದಿಯನ್ನು ಕೊಟ್ಟು ಇಪ್ಪತ್ತು ವರ್ಷಗಳು ಆಗಿದ್ದರೂ ಕೂಡಾ ಇನ್ನೂ ಅದನ್ನು ಜಾರಿಗೊಳಿಸದೆಂತೆ ಇವತ್ತು ಮಹಾರಾಷ್ಟ್ರ ಮತ್ತು ಕರ್ನಾಟಕ, ಕರ್ನಾಟಕ ಮತ್ತು ಕೇರಳ ಈ ರೀತಿಯಲ್ಲಿ ವಾದವಿವಾದಗಳು, ಗಡಿ ಸಮಸ್ಯೆಗಳು, ಭಾಷಾ ಸಮಸ್ಯೆ, ಈ ಗೊಂದಲಗಳು, ಅದರಿಂದ ಆಗತಕ್ಕಂಥ ಅನೇಕ ಅನಾಹುತಗಳು ಇವೆಲ್ಲಕ್ಕೂ ಕಾರಣವಾದ ಈ ಕೇಂದ್ರ ಸರ್ಕಾರದ ನಿಧಾನ ಪ್ರವೃತ್ತಿಯೇ ಇದಕ್ಕೆ ಕಾರಣ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ಇನ್ನಾದರೂ ಅರಿತುಕೊಂಡು ಈ ರಾಜ್ಯಗಳಲ್ಲಿ ಆದರಲ್ಲಿಯೂ ಆ ಭಾಗದಲ್ಲಿರತಕ್ಕಂಥ ಜನರಲ್ಲಿ ಒಂದು ಉತ್ತಮ ವಾತಾವರಣವನ್ನು ನಿರ್ಮಾಣ ಮಾಡಬೇಕಾದರೆ ಆದಷ್ಟು ಜಾಗ್ರತೆ ಈ ಮಹಾಜನ್ ವರದಿಯನ್ನು ಇವತ್ತು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು, ಆದರಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ ಎಂದರೆ ಮಹಾಜನ್ ವರದಿಯಲ್ಲಿ ಏನಾದರೂ ಬದಲಾವಣೆ ಇದ್ದರೆ ಅದರ ಬಗ್ಗೆ ಕೂಲಿತು ಚರ್ಚೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.ಈ ರೀತಿಯಲ್ಲಿ ಆದಷ್ಟು ಬೇಗ

ಈ ಮೂರು ರಾಜ್ಯಗಳವರನ್ನೂ ಕರೆಯಿಸಿ ಅಂದರೆ ಕೇರಳ, ಮಹಾರಾಷ್ಟ್ರ, ಕರ್ನಾಟಕದವರನ್ನೂ ಕರೆಸಿ ಗಡಿ ಸಮಸ್ಯೆಯನ್ನು ಆದಷ್ಟು ಶೀಘ್ರವಾಗಿ ಮಹಾಜನ್ ವರದಿ ಆಧಾರದ ಮೇಲೆ ಇತ್ಯರ್ಥಪಡಿಸಬೇಕು ಎಂದು ನಾನು ಕೂಡ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಾ ಮತ್ತು ಮಾನ್ಯ ಮುಖ್ಯಮಂತ್ರಿಗಳು ಪಂಡಿಸಿರತಕ್ಕ ಈ ನಿರ್ಣಯವನ್ನು ಸಂಪೂರ್ಣವಾಗಿ ಪಕ್ಷದ ವರತಿಯಿಂದ ಬೆಂಬಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾವಮಯ್ಯ (ಮುಳಬಾಗಿಲ್).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದ ಸುಮಾರು ೨೦ ವರ್ಷಗಳಿಂದಲೂ ಮುಂದುವರಿದುಕೊಂಡು ಹೋಗಿರತಕ್ಕದ್ದು ಬಹಳ ಶೋಚನೀಯವಾದ ವಿಚಾರವಾಗಿದೆ ಈ ಒಂದು ಭಾವನಾತ್ಮಕತೆಯನ್ನು ಬೆಳೆಸಿ ಚಳುವಳಿ ಮಾಡಿ ಅಲ್ಲಿನ ಸಾಮಾನ್ಯ ಜನರಿಗೆ ತೊಂದರೆ ಕೊಡುತ್ತಿರುವುದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ 'ಗೀವ್ ಅಂಡ್ ಟೇಕ್' ರೀತಿಯಲ್ಲಿ ಈಗಲಾದರೂ ಕೂಡ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು. ಇದು ಬಹಳ ಮುಖ್ಯವಾದದ್ದೂಹಾಗಿದೆ. ಗಡಿ ವಿವಾದ ಆಂಧ್ರ ಮತ್ತು ತಮಿಳುನಾಡಿಂ ರಾಜ್ಯಗಳಲ್ಲಿಯೂ ಇತ್ತು ಪಾಥಸ್ಕರ್ ಅವಾರ್ಡ್ ಆಗ್ ತಮಿಳುನಾಡು ಹಾಗೂ ಆಂಧ್ರದವರು ಇಬ್ಬರೂ ಒಪ್ಪಿಕೊಂಡರು ಅಲ್ಲಿನ ಗಡಿ ಸಮಸ್ಯೆ ಪರಿಹಾರವಾಯಿತು. ಅದೇ ರೀತಿಯಾಗಿ ಇಲ್ಲಿನ ಮುಖ್ಯಮಂತ್ರಿಗಳೂ ಸಹ ಕುಳಿತುಕೊಂಡು ಇಲ್ಲವೇ ಕೇಂದ್ರ ಸರ್ಕಾರದವರ ಜೊತೆ ಮಾತನಾಡಿ ಈ ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಸಂಕುಚಿತ ಭಾವನೆಯನ್ನು ತೊರೆದು ಶಾಂತಿಯುತವಾಗಿ ಇದನ್ನು ತೀರ್ಮಾನಿಸಬೇಕು. ಅನಾವಶ್ಯಕವಾಗಿ ಈ ಭಾಷಾಂಧತೆಯನ್ನು ಬೆಳೆಸುವುದು, ಸಂಕುಚಿತ ಮನೋಭಾವನೆಯನ್ನು ಇನ್ನೂ ಬೆಳೆಸುವುದು ಬೇಡ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ, ಇದೀಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಮಹಾಜನ್ ವರದಿ ಆಧಾರದ ಮೇಲೆ ಗಡಿ ವಿವಾದದ ಬಗ್ಗೆ ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಒಪ್ಪಿ ಅದಕ್ಕೆ ನನ್ನ ಬೆಂಬಲವನ್ನು ಕೊಡುತ್ತಿದ್ದೇನೆ. ಮಹಾರಾಷ್ಟ್ರದವರು ಕನ್ನಡಿಗರ ಔದಾರ್ಯವನ್ನು,ಸೌಹಾರ್ದತೆಯನ್ನು. ಪ್ರೀತಿ-ಪ್ರೇಮ ಇದರ ಲಾಭವನ್ನು ತೆಗೆದುಕೊಂಡು ನಮಗೆ ಬಹಳ ಅನ್ಯಾಯ ಮಾಡಿದರು ಎಂಬ ವಿಚಾರವನ್ನು ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತಿನಲ್ಲಿ ನೂರಕ್ಕೆ ನೂರರಷ್ಟು ಸತ್ಯಾಂಶ ಇದೆ. ಭಾಷಾವಾರು ರಾಜ್ಯ ವಿಂಗಡಣೆ ಆಗಬಾರದಿತ್ತು. ಆಗಿದೆ ಎಂದು ಹೇಳಿದ್ದಾರೆ. ಕೇರಳಕ್ಕೆ ಹೋದರೆ ಅಲ್ಲಿ ಮಲೆಯಾಳಂ ಬಿಟ್ಟು ಬೇರೆ ಯಾವ ಪುಸ್ತಕವೂ ಕಂಡುಬರುವುದಿಲ್ಲ. ಅಲ್ಲಿನ ಅಸೆಂಬ್ಲಿಯಲ್ಲಿನ ೧೪೪ ಜನ ಎಲ್ಲಾ ಸದಸ್ಯರು ಮಲೆಯಾಳಂನಲ್ಲಿಯೇ ಮಾತನಾಡುತ್ತಾರೆ ತಮಿಳುನಾಡಿನಲ್ಲಿ ತಮಿಳು ಬಿಟ್ಟು ಬೇರೆ ಯಾವ ಭಾಷೆಯನ್ನೂ ಆಡುವುದಿಲ್ಲ. ಆಂಧ್ರದಲ್ಲಿಯೂ ತೆಲುಗು ಮಾತನಾಡುತ್ತಾರೆ.ಆದರೆ ಕನ್ನಡ ನಾಡಿನಲ್ಲಿ ನಮ್ಮ ಔದಾರ್ಯ, ಸೌಹಾರ್ದತೆಗಳ ಲಾಭವನ್ನು ಬಳಸಿಕೊಂಡು ಕೆಲವರು ಗಲಾಟೆ ಮಾಡುತ್ತಿದ್ದಾರೆ ನಾವು ಕೆಳಕ್ಕೆ ಬಿದ್ದಿದ್ದೇವೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಮಹಾರಾಷ್ಟ್ರದವರ ಒತ್ತಾಯದಿಂದ ಈ ಒಂದು ಮಹಾಜನ್ ಕಮೀಷನ್ ನೇಮಕ ಮಾಡಿದಾಗ ಯಾವರೀತಿ ಆಯಿತು ಎಂದು ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಕರ್ನಾಟಕದ ಒಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಸಹ ಬೇಡ ಎಂದು ಹೇಳಿದ್ದರು, ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಈ ಸಂದರ್ಭದಲ್ಲಿ ಆದನ್ನು ಹೇಳಿದರು ಇಷ್ಟೆಲ್ಲಾ ಹೇಳಿದರೂ ಕಡೆಗೂ ನಾವು ಒಪ್ಪಿಕೊಳ್ಳಬೇಕಾದ ಪ್ರಸಂಗ ಬಂತು,ಸಮಿತಿಯವರು ಕೊಟ್ಟಿರುವ ವರದಿಯನ್ನು ಒಪ್ಪಿಕೊಳ್ಳುತ್ತೇವೆಂದು ಮಹಾರಾಷ್ಟ್ರದವರು ಹೇಳಿದರು ಈಗ ನಮಗೆ ಅನ್ಯಾಯವಾಗಿದೆ, ಎಂದು ಅವರು ವರದಿಗೆ ವಿರೋಧ ಮಾಡುವಾಗ ನಮಗೆ ಗಣನೀಯವಾಗಿ ಅನ್ಯಾಯ ಮಾಡುತ್ತಿದ್ದಾರೆ ಎಂಬ ಬಗ್ಗೆ ಯಾವ ಅನುಮಾನವೂ ಇಲ್ಲ ಈ ಒಂದು ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ ವಿಶ್ವಾಮಿತ್ರ ಬಹಳ ದೊಡ್ಡ ಮುನಿ ಹಾಗೂ ಖಚಿತ ಅವನು ಒಮ್ಮೆ ತಪಸ್ಸಿಗೆ ಕುಳಿತ ವಿಶ್ವಾಮಿತ್ರನು ತಪಸ್ಸಿಗೆ ಕುಳಿತಾಗ ಅವನ ದೊಡ್ಡ ತಪಸ್ಸನ್ನು ತಪ್ಪಿಸಲು ಮೇನಕೆಯನ್ನು ಕಳಿಸಿಕೊಟ್ಟರು. ಮೇನಕೆ ದೊಡ್ಡ ರೂಪವತಿ. ಅವಳು ತನ್ನ ಸುಂದರ ನೃತ್ಯ, ಭಾವಭಾವಗಳನ್ನು ಪ್ರದರ್ಶಿಸಿದಳು ವಿಶ್ವಾಮಿತ್ರ ಕಣ್ಣು ತೆಗೆದು ನೋಡಲಿಲ್ಲ ಅವಳ ಹಾವಭಾವಗಳು ಜಾಸ್ತಿ ಆದಾಗ ವಿಶ್ವಾಮಿತ್ರ ಕಣ್ಣು ಬಿಟ್ಟು ನೋಡಿದ, ತಪೋ ಭಂಗ ಆಯಿತು. ಅವರಿಬ್ಬರ ಸಮ್ಮಿಲನ ಆಯಿತು. ಆ ಸಮ್ಮಿಲನದಿಂದ ಒಂದು ಮಗುವೂ ಆಯಿತು. ಮಗು ಆದ ಮೇಲೆ ವಿಶ್ವಾಮಿತ್ರ ಇದು ನನ್ನ ಮಗು ಅಲ್ಲ ಎಂದು ಹೇಳಿದ, ಈ ರೀತಿ ಆಗಿದೆ ಮಹಾರಾಷ್ಟ್ರದವರು ಹೇಳುತ್ತಿರುವ ಮಾತು

ಮಹಾರಾಷ್ಟ್ರದವರೇ ಮಹಾಜನ್ ಸಮಿತಿ ನೇಮಕಕ್ಕೆ ಒಪ್ಪಿಸಿದ್ದು - ಆ ಸಮಿತಿಯ ತೀರ್ಪನ್ನು ಒಪ್ಪಿಕೊಳ್ಳುತ್ತೇವೆ ಎಂದು ಅವರು ಮೊದಲು ಹೇಳಿ ಈಗ ಅದು ನಮಗೆ ಬೇಡ ಎಂದಂತಿದೆ ಅವರು ಹೇಳುವುದಾದರೆ ವಿಶ್ವಾಮಿತ್ರನ ಕಥೆಯನ್ನು ಮಹಾರಾಷ್ಟ್ರದವರಿಗೆ ಹೋಲಿಕೆ ಮಾಡಬಹುದು. ಇಮೊತ್ತು ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ಕೋಟಿ ಕನ್ನಡಿಗರ ಪರವಾಗಿ ಹೇಳಿದಂಥ ಪ್ರತಿಯೊಂದು ಶಬ್ದವೂ ಸಹ ತೂಕದಿಂದ ಕೂಡಿದ್ದಾಗಿದೆ ಮತ್ತು ಗಟ್ಟಿಮುಟ್ಟಾಗಿದ್ದು ಆಗಿದೆ. ಮಾನ್ಯ ಬಸವಲಿಂಗಪ್ಪನವರು ಮತ್ತು ಮಾನ್ಯ ವೀರಪ್ಪ ಮೊಯಿಲಿ ಅವರು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಬೆಳಗಾಂ ಬಗ್ಗೆ ಬಹಳಷ್ಟು ಕಳಕಳಿ ಇದೆ. ಇದೇ ಮಾತನ್ನು ಅವರು ಪರಿಪೂರ್ಣತೆಯ ಮನಸ್ಸಿನಿಂದ, ದೃಢತೆಯ ಮನಸ್ಸಿನಿಂದ ಸ್ವಲ್ಪವಾಗಿ ಮತ್ತು ಸಾಲಲಿತವಾಗಿ ಹೇಳಿದ್ದಾರೆ. ಈ ಕಾರಣದಿಂದ ನಾನು ಅವರನ್ನು ಅಭಿನಂದಿಸುತ್ತೇನೆ. ಮಹಾರಾಷ್ಟ್ರದವರು ಗಡಿ ವಿಚಾರ ಬಂದಾಗಲೆಲ್ಲಾ ಅವರು ತಾವು ಕಾಂಗ್ರೆಸ್‌ನವರು, ನಾವು ಜನತಾ ಪಕ್ಷದವರು ನಾವು ಶಿವ ಸೇನಾ ಪಕ್ಷದವರು ಎಂಬುದನ್ನು ಮರೆತು ತಿಳಿದುಕೊಂಡು ನಿರ್ಣಯಗಳನ್ನು ಪಾಸ್ ಮಾಡುತ್ತಾರೆ. ಅವರು ಮಾಡುವ ಇಂತಹ ನಿರ್ಣಯಗಳನ್ನು ಎಲ್ಲರೂ ಒಂದೇ ಎಂದು ನಾವು ಇಲ್ಲಿ ಈ ಸದನದಲ್ಲಿ ಪಕ್ಷಬೇಧವಿಲ್ಲದೆ ವಿರೋಧ ಮಾಡಬೇಕು. ಮಹಾಜನ್ ವರದಿಯನ್ನು ನಾವು ಒಪ್ಪಲೇಬೇಕು, ಇದನ್ನು ಬಿಟ್ಟು ಇದಕ್ಕೂ ಮೊದಲು ಇದ್ದಂಥ ಯಥಾಸ್ಥಿತಿಯನ್ನ ಒಪ್ಪಿ ಕೊಳ್ಳುವುದು ಸಹ ಬೇಡ ಏಕೆಂದರೆ, ಯಥಾಸ್ಥಿತಿಯನ್ನೇ ಒಪ್ಪಿಕೊಂಡರೆ ನಮಗೆ ಕಾಸರಕೂಡು ಸಿಗುವುದಿಲ್ಲ. ಉತ್ತರ ಭಾರತದ ನ್ಯಾಯವಾದಿ ಒಬ್ಬರು ಕೊಟ್ಟಿರುವ ತೀರ್ಪನ್ನು ಸಂಬಂಧಪಟ್ಟ ಎಲ್ಲಾ ರಾಜ್ಯಗಳವರು ಒಪ್ಪಿಕೊಳ್ಳಲೇಬೇಕು. ಇದೇ ಮಾತನ್ನು ಪ್ರಧಾನಿ ರಾಜೀವ್‌ಗಾಂಧಿ ಅವರು ಹೇಳಿದ್ದು ಪತ್ರಿಕೆಗಳಲ್ಲಿ ವರದಿ ಆಗಿದೆ, ಮಹಾಜನ್ ವರದಿಯೇ ಶ್ರೇಷ್ಠವಾದುದು ಎಂದು ಎಲ್ಲರೂ ಹೇಳುತ್ತಿರುವಾಗ ಮಹಾರಾಷ್ಟ್ರದ ಮುಖಂಡರು ಯಾವ ರೀತಿಯಲ್ಲಿಯಾದರೂ ಬೆಳಗಾಂ ನಗರವನ್ನ ಕಬಳಿಸಲು ನೋಡುತ್ತಿದ್ದಾರೆ. ಇಂತಹದ್ದಕ್ಕೆ ಕನ್ನಡಿಗರಾದ ನಾವು ಪ್ರತಿಭಟಿಸಲೇಬೇಕು. ಕನ್ನಡಿಗರಾದ ನಾವು ಸಹ ಗಟ್ಟಿಗರು ಎಂಬುದನ್ನು ಅವರಿಗೆ ತೋರಿಸಿಕೊಡಬೇಕು, ಮಾನ್ಯ ವೀರಪ್ಪ ಮೊಯಿಲಿ ಅವರು ಹೇಳಿದಂತೆ ಈಗ ಮಾನ್ಯ ಮುಖ್ಯಮಂತ್ರಿಗಳು ತಂದಿರುವ ನಿರ್ಣಯಕ್ಕೆ ಕರ್ನಾಟಕ ರಾಜ್ಯದ ಳಿ ಕೋಟಿ ಕನ್ನಡಿಗರ ಸಂಪೂರ್ಣವಾದ ಬೆಂಬಲ ಇದೆ. ಮಹಾಜನ್ ವರದಿಗೆ ನಾವು ಕಟಿಬದ್ಧ ಏನೇ ಆದರೂ ಏನೇ ಬಂದರೂ ಅದಕ್ಕೆಲ್ಲಾ ಹೊರಾಡಲು ನಾವೆಲ್ಲ ಸದಾಸಿದ್ಧ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಈ ವಿಚಾರದಲ್ಲಿ ಈ ಮಾನ್ಯ ಸಭೆ ಒಮ್ಮತದಿಂದ ಒಂದು ನಿರ್ಣಯವನ್ನು ಕೈಗೊಳ್ಳುತ್ತಿರುವುದನ್ನು ಈ ಕರ್ನಾಟಕ ವಿಧಾನಸಭೆಯ ಒಂದು ಇತಿಹಾಸದಲ್ಲಿ ಸುವರ್ಣಕ್ಷರಗಳಲ್ಲಿ ಬರೆದಿಡಬೇಕಾಗಿದೆ. ನಾನು ಮಹಾರಾಷ್ಟ್ರದ ಗಡಿ ಪ್ರದೇಶದಿಂದ ಇಲ್ಲಿಗೆ ಆಯ್ಕೆ ಆಗಿ ಬಂದಿದ್ದೇನೆ. ಬೆಳಗಾಂನ್ನು ಹಂಚಾಜು ಮಾಡುವ, ಮಾರಾಟ ಮಾಡುವ ಒಂದು ಪ್ರಸಂಗ ಏನಿದೆ, ಇದು ನಾಲ್ಕು ಕೋಟಿ ಕನ್ನಡಿಗರ ಮೈಯಲ್ಲಿ ರಕ್ತ ಇರುವವರಿಗೂ ಕೂಡ ಒಂದು ಸವಾಲಾಗಿದೆ ಎಂದರೆ ತಪ್ಪಾಗಲಾರದು. ಕಿತ್ತೂರು ರಾಣಿ ಚೆನ್ನಮ್ಮ ಸಹ ಬೆಳಗಾಂ ಜಿಲ್ಲೆಯಲ್ಲಿ ಹುಟ್ಟಿದ್ದುದು. ಬೆಳಗಾಂ ಕರ್ನಾಟಕಕ್ಕೆ ಸೇರಿದ್ದು ಎಂದು ಮಹಾಜನ್ ವರದಿಯಲ್ಲಿಯೇ ಹೇಳಿರುವಾಗ ಅವನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಈ ವರದಿಯನ್ನು ಒಪ್ಪಿ ಕೊಳ್ಳತಕ್ಕ ಜವಾಬ್ದಾರಿ ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎಂದು ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಮತ್ತು ಈ ಬಗ್ಗೆ ಸಾಕಷ್ಟು ಸ್ಪಷ್ಟೀಕರಣವನ್ನು ಸಹ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ನಾನು ಸ್ಪಷ್ಟಪಡಿಸುತ್ತೇನೆ, ಏನೆಂದರೆ, ಮಹಾರಾಷ್ಟ್ರದವರೇ ಆಗಲೀ ಅಥವಾ ಭಾರತ ದೇಶದ ಯಾವ ಭಾಗದ ಯಾವ ಜನರೇ ಬಂದು ಕೇಳಿದರೂ ಸಹ ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಆಗಲೀ ಅಥವಾ ಬೇರೆ ಯಾರಿಗೇ ಆಗಲೀ ಕನ್ನಡಿಗರಾದ ನಾವು ಕೊಡುವಂತಹ ಪರಿಸ್ಥಿತಿಯೇ ಬರುವುದಿಲ್ಲ. ಎಂದೆಂದಿಗೂ ಕೂಡ ಬೆಳಗಾಂ ಕರ್ನಾಟಕಕ್ಕೆ ಸೇರಿದ್ದು ಎಂದು ಇವೊತ್ತು ಈ ಮಹಾಜನ್ ವರದಿ ಪ್ರಕಾರ ನಾವು ಅನೇಕ ಭಾಗಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಜತ್, ಅಕ್ಕಲ್‌ಕೋಟ್, ಸೊಲ್ಲಾಪುರ ಇಲ್ಲೆಲ್ಲಾ ಶೇಕಡ ೬೦ರಷ್ಟು ಕನ್ನಡಿಗರೇ ಇದ್ದರೂ ಸಹ ಈ ವರದಿಯ ಪ್ರಕಾರ ನಾವು ಈ ಪ್ರದೇಶಗಳನ್ನು ಬಿಟ್ಟುಕೊಡುವಂತಹ ಔದಾರ್ಯವನ್ನು ನಾವು ತೋರಿಸುತ್ತಿದ್ದೇವೆ. ಆದರೆ ಅವರು ನಮ್ಮ ಈ ಔದಾರ್ಯವನ್ನು ಹಾಗೂ ವಿಶ್ವಾಸವನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ. ಮಹಾರಾಷ್ಟ್ರದ ವಿಧಾನಸಭೆಯಲ್ಲಿ ಬೆಳಗಾಂನ್ನು ಕೊಂಡುಕೊಳ್ಳುವಂತಹ

ನಿರ್ಣಯವನ್ನು ಮಂಡಿಸುವಂತಹ ಬುದ್ಧಿಯನ್ನು ಪರಮಾತ್ಮ ಅಲ್ಲಿನ ಮುಖ್ಯಮಂತ್ರಿಗಳಿಗೆ ಏತಕ್ಕೆ ಕೊಟ್ಟನೋ ಗೊತ್ತಿಲ್ಲ. ಇಂತಹ ಶೂರತನವನ್ನು ಅವರು ಬೇರೆ ಇನ್ನಾವುದಕ್ಕಾದರೂ ತೋರಿಸುವುದು ಒಳ್ಳೆಯದು, ಈ ಮಹಾಜನ್ ವರದಿಯ ಪ್ರಕಾರ ನಮಗೆ ಅನೇಕ ಭಾಗಗಳು ಬರಬೇಕಾಗಿದೆ. ಮಹಾರಾಷ್ಟ್ರದಲ್ಲಿ ಬಾಕಿ ಇರತಕ್ಕಂಥ ಅನೇಕ ವಿಷಯಗಳಿವೆ. ಅದನ್ನಾದರೂ ಅಲ್ಲಿನ ವಿಧಾನ ಸಭೆಯಲ್ಲಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅನ್ನಿಸುತ್ತದೆ. ಕೊಯ್ನಾನದಿ ನೀರನ್ನು ಕರ್ನಾಟಕಕ್ಕೆ ಕೊಡಿ ಎಂದಾಗ ಒಪ್ಪದೇ ಇರತಕ್ಕ ಮಹಾರಾಷ್ಟ್ರರವರು ಕನ್ನಡಿಗರನ್ನು ಕೊಂಡುಕೊಳ್ಳುವುದಕ್ಕೆ ಹೊರಟಿರತಕ್ಕ ವಿಷಯವನ್ನು ಅಲ್ಲಿನ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿರುವುದು ನಿಜವಾಗಿಯೂ ಹಾಸ್ಯಾಸ್ಪದವಾದ ಸಂಗತಿಯಾಗಿದೆ. ಮಾನ್ಯ ಅಧ್ಯಕ್ಷರೆ, ಮಹಾಜನ್ ವರದಿ ಪ್ರೌಢವಾಗಿದೆ, ಕನ್ನಡಿಗರು ವಿಪಲ ವಿಶಾಲ ಮನೋಭಾವದಿಂದ ಒಪ್ಪಿಕೊಂಡಿರತಕ್ಕ ಮಹಾಜನ್ ವರದಿಯನ್ನು ತಕ್ಷಣ ಜಾರಿಗೆ ತರತಕ್ಕ ಬಗ್ಗೆ ಕೇಂದ್ರಸರ್ಕಾರದ ಮೇಲೆ ಒತ್ತಡ ತರಲು ಬಹುಶಃ ಒಂದು ಜಾಥಾ ಡೆಲ್ಲಿಗೆ ಹೋಗಬೇಕು. ಈ ರೀತಿ ಹೋಗುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಇದರಲ್ಲಿ ನಮ್ಮ ರಕ್ಷಣೆಯನ್ನು ಪಣ ಇಟ್ಟು ಡೆಲ್ಲಿಗೆ ಹೋಗಿ ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕ ಬಗ್ಗೆ ಒತ್ತಾಯ ಮಾಡತಕ್ಕ ಒಂದಂ ಸುಯೋಗ ಬರಲಿ ಎಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—(ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೆ, ಈ ಕನ್ನಡ ತಾಯಿ ಭುವನೇಶ್ವರಿ ತನ್ನ ನೆಲದಲ್ಲಿ ಎಲ್ಲಾ ಭಾಷೆಯ ಜನರಿಗೆ ನೆರಳು ಕೊಟ್ಟಿದ್ದಾಳೆ. ಇದು ಆಕೆಯ ದೌರ್ಬಲ್ಯ ಅಲ್ಲ, ಆಕೆಯ ಹಿರಿತನ ಆಕೆಯ ಔದಾರ್ಯ. ವಿಜಯನಗರ ಸಾಮ್ರಾಜ್ಯದ ಪರಂಪರೆಯನ್ನು ನೋಡಿದ ಜನ ನಾವು, ಸೇರಿನಲ್ಲಿ ವಜ್ರ ವೈಢೂರ್ಯಗಳನ್ನು ಅಳೆದಿದ್ದೇವೆ, ನಮಗೆ ಬಡತನ ಇಲ್ಲ. ಅಧ್ಯಕ್ಷರೆ, ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ೧೦೦ ಕೋಟಿಗೆ ಮಾರಾಟದ ಮಾತನ್ನಾಡಿದ್ದಾರೆ. ಈ ರೀತಿ ಕನ್ನಡಿಗರ, ಗಂಡುಗಲಿಗಳ ಗುಡಸುತನವನ್ನು ಕೆಣಕುವ ಕೆಲಸ ವಿಷಾದಕರ. ಅಧ್ಯಕ್ಷರೆ, ಬೆಳಗಾಂ ಏನಿದೆ ಅದು ಕನ್ನಡ ತಾಯಿ ಭುವನೇಶ್ವರಿಯ ಕಿರೀಟದಲ್ಲಿರತಕ್ಕ ವಜ್ರ. ಈ ವಜ್ರವನ್ನು ಯಾವ ಶಕ್ತಿಯೂ ಕೂಡ ಆ ತಾಯಿಯ ಕಿರೀಟದಿಂದ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಸ್ವಾಮಿ, ಕುಮಾರ ವ್ಯಾಸ, ರನ್ನ, ಪೊನ್ನ, ಪಂಪ, ಹರಿಹರ, ರಾಘವಾಂಕ- ಇವರ ಸಾಹಿತ್ಯದಿಂದ ಬೆಳೆದು ಘಮಘಮಿಸುತ್ತಿರುವ ಕನ್ನಡ ನಾಡಿನಲ್ಲಿರುವ ಬೆಳಗಾವಿಯನ್ನು ತೆಗೆದುಕೊಳ್ಳಲಿಕ್ಕೆ ಜಗತ್ತಿನ ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ, ಯಾರೂ ಏನು ಮಾಡಲಿಕ್ಕೂ ಆಗುವುದಿಲ್ಲ.

ಅಧ್ಯಕ್ಷರೆ,

ಗಂಡುಗಲಿ ಕನ್ನಡಿಗರು ನಾವು
ಭುವನೇಶ್ವರಿಯ ಮಕ್ಕಳು ನಾವು
ಭುವನೇಶ್ವರಿಯ ಗಡಿ ದಾಟಿ ಬಂದವರನಂ
ಬಿಡುವಪರು ನಾವಲ್ಲ.
ಮೆಟ್ಟಿ ನಿಂತರೆ ಕೆಣಕುವವರು ಯಾರೂ ಇಲ್ಲ
ಇದೋ ಎಚ್ಚರ ಎಚ್ಚರ ಎಚ್ಚರ.

ತಮಗೆ ಅಭಿನಂದನೆಗಳು,

ಶ್ರೀ ಮಲ್ಲಾರಿಗೌಡಎಸ್. ಪಾಟೀಲ್(ಸಂಕೇಶ್ವರ).—ಸನ್ಮಾನ್ಯ ಅಧ್ಯಕ್ಷರೆ, ಇಪತ್ತು ತಂದಂಥ ನಿರ್ಣಯವನ್ನು ಈ ಸದನದಲ್ಲಿ ಸಂಪೂರ್ಣವಾಗಿ ಬೆಂಬಲಿಸುತ್ತ ಇದ್ದೇನೆ. ಗಡಿ ಭಾಗದಿಂದ ಬಂದಂಥ ಜನ ನಾವು. ಮಹಾರಾಷ್ಟ್ರದ ಗಡಿ ಭಾಗದಿಂದ ಬಂದುಂಥ ಶಾಸಕರು ಏನಿದ್ದೇವೆ ಪ್ರತಿ ಸಲ ಇಂತಹ ಸಂದರ್ಭ ಬಂದಾಗ ಒಂದು ಅನುಕಂಪ ನಮ್ಮಲ್ಲಿರುತ್ತದೆ. ಇಂತಹ ಪರಿಸ್ಥಿತಿ ಬಂದಾಗ ಭಯಭೀತವಾದ ವಾತಾವರಣ ಕೂಡ ನಮ್ಮ ಭಾಗದಲ್ಲಿರುತ್ತದೆ. ಯಾವಾಗ ಏನಾಗುತ್ತದೋ ಅಥವಾ ಯಾವಾಗಲಾಟಿಗೆ ಆ ಮುಗ್ಧ ಜನ ಬಲಿಯಾಗುತ್ತಾರೋ ಎನ್ನತಕ್ಕಂಥ ಭಾವನೆ ಕೂಡ ನಮ್ಮಲ್ಲಿ ಬರುತ್ತದೆ. ಇಪತ್ತಿನ ದಿವಸ ಈ ಸದನದ ನಾಯಕರೂ ಕರ್ನಾಟಕದ ಮುಖ್ಯ ಮಂತ್ರಿಗಳೂ ಆದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ಬಗ್ಗೆ ಒಂದು ನಿರ್ಣಯ ತಂದು ಅದರೆ ಸಂಪೂರ್ಣವಾದಂಥ ಒಮ್ಮು

ಹಿನ್ನೆಲೆಯನ್ನು ಪ್ರಸ್ತಾಪಿಸಿದ್ದಾರೆ. ೧೯೫೬ರ ನಂತರ ಗಡಿ ಭಾಗದಲ್ಲಿರತಕ್ಕಂಥ ಪ್ರತಿಯೊಂದು ಪ್ರದೇಶದಲ್ಲಿ ತನ್ನದೇ ಆದಂಥ ವರ್ಚಸ್ಸನ್ನು ಹೊಂದಿದ್ದರೂ ಇತ್ತೀಚ್ಚಲಾಗಿ ಅಲ್ಲಿರತಕ್ಕಂಥ ವಾತಾವರಣ ಸ್ವಲ್ಪ ಮಟ್ಟಿಗೆ ತಿಳಿಯಾಗಿ ಅಲ್ಲಿರತಕ್ಕಂಥ ಜನ ಕನ್ನಡನಾಡಿನ ಹಿನ್ನೆಲೆಯನ್ನು ಅರಿತು, ಇವತ್ತಿನ ದಿವಸ ಅವರಲ್ಲಿರತಕ್ಕಂಥ ಮೂಢ ನಂಬಿಕೆಗಳು,ಮೂಢತನ ಬಿಟ್ಟು ಬೇರೆ ಬೇರೆ ಪಕ್ಷದ ಪ್ರತಿನಿಧಿಗಳನ್ನು ಕನ್ನಡ ನಾಡಿನ ವಿಧಾನ ಸಭೆಗೆ ಆರಿಸಿ ಕಳಿಸಿಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ, ಹೊರಗಡೆಯಿಂದ ಬರತಕ್ಕ ಜನ ಏನಿದ್ದಾರೆ ಮೊದಲು ಅವರನ್ನು ತಡೆಹಿಡಿಯಬೇಕು. ಅವರು ಕನ್ನಡ ಬಾಂಧವರು ಇರಬಹುದು. ಮರಾಠಿ ಬಾಂಧವರು ಇರಬಹುದು. ನಮ್ಮಲ್ಲಿರತಕ್ಕ ಸೌಹಾರ್ದತೆಯನ್ನು ಕಾಯ್ದುಕೊಂಡು ಹೋಗಬೇಕು. ಬೆಳಗಾವಿಯಲ್ಲಿ ಏನಾದರೂ, ಘಟನೆ ನಡೆದರೆ ಬೆಂಗಳೂರಿನಿಂದ ಬರುವುದಾಗಲೀ, ಬೆಂಗಳೂರಿನಲ್ಲಿ ಏನಾದರೂ ಘಟನೆ ನಡೆದರೆ ಬೆಳಗಾವಿಯಿಂದ ಬರುವುದಾಗಲಿ ಸರಿಯಲ್ಲ. ಆಯ್ಕೆಯಾಗಿ ಬಂದ ಪ್ರತಿನಿಧಿಗಳು ಇರಲಿ, ಯಾರೇ ಇರಲಿ, ಆ ಭಾಗದಲ್ಲಿ ಚುನಾಯಿತರಾಗಿರುವಂಥ ಪ್ರತಿನಿಧಿಗಳು, ನಾಗರೀಕರು ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವುದಕ್ಕೆ ಸಿದ್ಧರಿದ್ದಾರೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ೧೦೦ ಕೋಟಿ ರೂಪಾಯೇಗಳಿಗೆ ಬೆಳಗಾವಿಯನ್ನು ಕೊಳ್ಳಲಾಗುವುದೆಂದು ಪ್ರಸ್ತಾಪ ಮಾಡಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ ಪ್ರಜಾ ಪ್ರಭುತ್ವ ನೀತಿಯಲ್ಲಿ ಇಂಥ ಪ್ರಸ್ತಾವನೆ ಬಂದಿರುವುದು ಸರಿಯಾದುದಲ್ಲ. ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಇಂಥ ಘಟನೆ ನಡೆಯಬಾರದಾಗಿತ್ತು. ದೇವರು ಅಲ್ಲಿನ ಮುಖ್ಯ ಮಂತ್ರಿಗಳಿಗೆ ಸದ್ಬುದ್ಧಿ ಕೊಡಲಿ ಎಂದು ನಾನು ಹಾರೈಸುತ್ತೇನೆ. ಕನ್ನಡ ನಾಡಿನ ಜನರ ಸೌಜನ್ಯವನ್ನು ತಾಳ್ಮೆಯನ್ನು ಅವರು ಕೆಣಕುವುದು ಬೇಡ. ಈ ಸದನದ ಪ್ರತಿಯೊಂದು ಪಕ್ಷದ ಸದಸ್ಯರು ಈ ವಿಚಾರದಲ್ಲಿ ತಮ್ಮ ಬೆಂಬಲವನ್ನು ಕೊಡುತ್ತಾರೆ. ನಾವು ಮಾತ್ರ ಗಟ್ಟಿಯಾಗಿ ನಿಲ್ಲಬೇಕು. ನಾವು ಒಂದು ವೇಳೆ ತಮ್ಮ ಕಾಲನ್ನ ಹಿಂದಕ್ಕೆ ತೆಗೆದರೆ ನಾವು ಹೇಳಿದಂತೆ ಹೃದಯದ ಎರಡು ಪುಷ್ಪಗಳು ಎಂದು ಬೆಳಗಾಂ ಬಗ್ಗೆ ಏನು ಹೇಳಿದ್ದೀರಿ, ಅದಕ್ಕಿಂತ ನಾನು ಮುಂದೆ ಹೋಗಿ ಹೇಳುವುದಾದರೆ. ಕರ್ನಾಟಕದ ಹೃದಯವೇ ಬೆಳಗಾಂ. ಹೃದಯ ಹೋದ ಮೇಲೆ ಶರೀರದ ಪ್ರಯೋಜನ ಏನೂ ಇರುವುದಿಲ್ಲ ನಾವು ನಮ್ಮ ರಾಜ್ಯಕ್ಕಾಗಿ ಯಾವ ರೀತಿಯ ತ್ಯಾಗಕ್ಕಾದರೂ ಸಿದ್ಧರಿದ್ದೇವೆ ಈ ಸದನ ಈ ದಿಸೆಯಲ್ಲಿ ಕೇಂದ್ರ ಸರ್ಕಾರದ ಗಮನವನ್ನು ಸೆಳೆದು ತನ್ನ ನಿರ್ಧಾರವನ್ನು ತಿಳಿಸಬೇಕು. ಈ ವಿಚಾರದಲ್ಲಿ ಇದೇ ಕೊನೇ ಮಾತಾಗಬೇಕು.

ಶ್ರೀ ರಾಮಕೃಷ್ಣಹೆಗಡೆ.—ಇವತ್ತು ಅಪರೂಪದ ಸಾಲಿಡಾರಿಟಿ ಎಂದು ಹೇಳಬೇಕಾಗಿದೆ. ಎರಡೂ ಕಡೆಯ ಸದಸ್ಯರುಗಳು ಉತ್ತಮವಾದಂಥ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಒಮ್ಮತದಿಂದ ಸ್ವಾಗತ ಮಾಡಿದ್ದಾರೆ. ಎಲ್ಲಾ ಕಡೆಯಿಂದಲೂ ಕವಿತೆ ಕವನ ಹೊರಸೂಸಿ ಬಂದಿವೆ. ಅವರೆಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು.— ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ.—

> "ಮಹಾಜನ ಆಯೋಗದ ಏತೀರ್ಪನ್ನು ಸಮಗ್ರವಾಗಿ ಜಾರಿಗೊಳಿಸಂಬ ಅನಿವಾರ್ಯತೆಯ ಬಗ್ಗೆ ಈ ಸದನವು ಈ ಹಿಂದೆ ಮೂರು ಬಾರಿ ಒಮ್ಮತದ ನಿರ್ಣಯವನ್ನು ಅಂಗೀಕರಿಸಿದೆ. ಮಹಾಜನ ವರದಿಯನ್ನು ಜಾರಿಗೆ ತರುವುದರಲ್ಲಿ ಆದ ವಿಳಂಬದ ದುರ್ಲಾಭವನ್ನು ಮಹಾರಾಷ್ಟ್ರದ ಮುಖಂಡರು ಪಡೆದಂ ಆಗಾಗ ಎರಡೂ ರಾಜ್ಯಗಳಲ್ಲಿ ಘರ್ಷಣೆಯ ವಾತಾವರಣವನ್ನು ಉಂಟು ಮಾಡುವುದು ಖಂಡನೀಯ.

ಮಹಾಜನ ಆಯೋಗದ ನೇಮಕವಾದಾಗ ಅದು ನೀಡುವ ತೀರ್ಮಾನ ಅಂತಿಮವಾದುದೆಂದೂ ಸಂಬಂಧಿಸಿದವರೆಲ್ಲರ ಮೇಲೆ ಅದು ಬಂಧನಕಾರಿ ಎಂದೂ ಒಪ್ಪಿಕೊಳ್ಳಲಾಗಿತ್ತು. ಈ ಒಪ್ಪಿಗೆಯಿಂದ ಯಾರೊಬ್ಬರಿಗೂ ಜಾರಿಕೊಳ್ಳುವ ಅವಕಾಶ ಇಲ್ಲ. ಆದುದರಿಂದ ರಾಷ್ಟ್ರದ ಸಮಗ್ರತೆಯ ದೃಷ್ಟಿಯಿಂದಲೂ ಮುಂತಾಗುವ ಅನಾವಶ್ಯಕ ಕಲಹ ಕಚ್ಚಾಟಗಳನ್ನು ತಪ್ಪಿಸುವ ದೃಷ್ಟಿಯಿಂದಲೂ ಮಹಾಜನ ವರದಿಯನ್ನು ಸ್ವಲ್ಪವೂ ವಿಳಂಬ ಮಾಡದೇ ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಕೇಂದ್ರ ಸರ್ಕಾರವನ್ನು ಈ ಸದನವು ಆಗ್ರಹಪಡಿಸುತ್ತದೆ.

ಪ್ರಸ್ತಾವ ಅಂಗೀಕಾರವಾಯಿತು.

ಸಭೆಯು ಈಗ ಎದ್ದು ನಾಳೆ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶ ಗೊಳ್ಳುವುದು.

ಸಭೆಯು ಸಾಯಂಕಾಲ ೬-೦೦ ಘಂಟೆಗೆ ಮುಕ್ತಾಯವಾಗಿ ಪುನಃ ದಿನಾಂಕ ೨೩-೩-೧೯೮೮ ರಂದು ಬೆಳಗ್ಗೆ ೧೧-೦೦ ಸೇರಲು ತೀರ್ಮಾನಿಸಿತು.